ಸಂಪುಟ : 11 ಸಂಚಿಕೆ: 55 ಪುಟ : 4+2 ಬೆಲೆ: 3.00 ಸೋಮವಾರ ಮಾರ್ಚ್ 30 2026 Mob : 9448326533- 9019256545 ಗದಗ

ಸಂಪಾದಕರು : ಎಚ್.ಎಮ್. ಶರೀಫನವರ್

# ವಿಜಯ ಸಾಕ್ಷಿ


ವಾಸ್ತವ, ವಸ್ತುನಿಷ್ಠ, ವಿಭಿನ್ನ... VIJAYASAKSHI KANNADA DAILY ಕನ್ನಡ ದಿನಪತ್ರಿಕೆ





Volume : 11 Issue : 55 Pages : 4+2 Price : 3.00 Monday March 30 2026 Gadag RNI No: KARKAN/2015/63412 E-mail: vijayasakshidaily@gmail.com Post Regn.No: GDG/72/2023-25

### ತೋಂಟದಾರ್ಯ ಮಠ ಜಾತ್ರೆ ವಿಚಾರ: ಮಧ್ಯಂತರ ಅರ್ಜಿ ವಜಾ! ರಾಜು ಖಾನಪ್ಪನವರ್ ಪ್ರತಿಕ್ರಿಯೆ

# ಸಾರ್ವಜನಿಕ ಹಿತಾಸಕ್ತಿ ಹೋರಾಟಕ್ಕೆ ಬಲ!





14 O.S. No 552/2025

17. Point No. 3: In the result proceed to pass the following;


**:ORDER:**

The application No.1filed U/o 39 Rule 1 and 2 of CPC by plaintiff is hereby rejected.

No order as cost.

(Dictated to the stenographer directly on computer typed by him, the same is corrected and then pronounced by me in the open court on this the **28th day of March 2026**.)

Sd/-
**(Smt. P.R.Patil )**
Addl. Senior Civil Judge and JMFC, Gadag.



IN THE COURT OF THE ADDL. SENIOR CIVIL JUDGE AND JMFC.,GADAG.

Present: Smt. Padmashree Ratnakar Patil, (B.A., L.L.B.Spl) Addl. Senior Civil Judge & JMFC, Gadag

Dated this the 28th day of March 2026

O.S. No.552/2025

PLAINTIFF : Sriman Niranjan Jagadaguru Dr.Tontad Siddaram Mahaswamigalu Tontad Swami Samstan Math, Gadag.

// Versus //

DEFENDANT : Raju S/o. Iranna Khanappanavar.

PARTIES TO I.A No.I

APPLICANT : Sriman Niranjan Jagadaguru Dr.Tontad Siddaram Mahaswamigalu Tontad Swami Samstan Math, Gadag.

-V/S-

OPPONENTS : Raju S/o. Iranna Khanappanavar.

ORDER ON I.A.I, FILED by BY THE PLAINTIFF U/O 39 RULE 1 AND 2 OF CPC

The plaintiff filed this application and prayed to restrained the defendant and his followers from abstracting work doing by Sri.Jagadguru Swami Tontadari Math. Specially during the yearly festival of Matha (ಜಾತ್ರಾ ಮಹೋತ್ಸವ) and further prayed for restrain them using defamatory words about plaintiff.



"ಸಾರ್ವಜನಿಕ ಹಿತಾಸಕ್ತಿಗಾಗಿ ನಡೆಸುತ್ತಿರುವ ಹೋರಾಟಕ್ಕೆ ನ್ಯಾಯ ಸಿಗುವವರೆಗೆ ನಮ್ಮ ಹೋರಾಟ ಮುಂದುವರಿಯುತ್ತದೆ"

**– ರಾಜು ಖಾನಪ್ಪನವರ,** ಸಂಚಾಲಕ, ಹಿಂದೂ–ವೀರಶೈವ–ಲಿಂಗಾಯತ ಯುವ ವೇದಿಕೆಯ ರಾಜ್ಯ ಸಮಿತಿ. ಗದಗ

**■ ವಿಜಯಸಾಕ್ಷಿ ಸುದ್ದಿ, ಗದಗ**

ನಗರದ ತೋಂಟದಾರ್ಯ ಮಠಕ್ಕೆ ಸಂಬಂಧಿಸಿದಂತೆ ಜಾತ್ರೆ ವಿಚಾರದಲ್ಲಿ ಸಲ್ಲಿಸಲಾದ ಮಧ್ಯಂತರ ಅರ್ಜಿಯನ್ನು ನ್ಯಾಯಾಲಯ ವಜಾಗೊಳಿಸಿದೆ ಎಂದು ಹಿಂದೂ–ವೀರಶೈವ–ಲಿಂಗಾಯತ ಯುವ ವೇದಿಕೆಯ ರಾಜ್ಯ ಸಂಚಾಲಕ ರಾಜು ಖಾನಪ್ಪನವರ ತಿಳಿಸಿದ್ದಾರೆ.

ಜಾತ್ರೆಯ ಹೆಸರಿನಲ್ಲಿ ಮಠದ ಮುಂಭಾಗದ ಸಾರ್ವಜನಿಕ ರಸ್ತೆಯನ್ನು ದೀರ್ಘಾವಧಿಗೆ ಬಂದ್ ಮಾಡಿ, ಹೊರ ರಾಜ್ಯದವರಿಗೆ ಟೆಂಡರ್ ನೀಡುವುದರಿಂದ ಸ್ಥಳೀಯ ವ್ಯಾಪಾರಸ್ಥರಿಗೆ ಹಾಗೂ ಸಾರ್ವಜನಿಕರ ಸಂಚಾರಕ್ಕೆ ತೊಂದರೆ ಉಂಟಾಗುತ್ತಿದೆ ಎಂದು ಹಿಂದೂ–ವೀರಶೈವ–ಲಿಂಗಾಯತ ಯುವ ವೇದಿಕೆಯ ರಾಜ್ಯ ಸಂಚಾಲಕ ರಾಜು ಖಾನಪ್ಪನವರ ಹಲವು ವರ್ಷಗಳಿಂದ ಹೋರಾಟ ನಡೆಸುತ್ತಿದ್ದಾರೆ.

ಈ ಹಿನ್ನೆಲೆಯಲ್ಲಿ ತೋಂಟ–ದಾರ್ಯ ಮಠದ ಜಗದ್ಗುರು ಡಾ. ತೋಂಟದ ಸಿದ್ಧರಾಮ ಮಹಾಸ್ವಾಮಿಗಳು ಅವರು ರಾಜು ಖಾನಪ್ಪನವರ ವಿರುದ್ಧ ರೂ. 20 ಲಕ್ಷ ಮಾನನಷ್ಟ ಮೊಕದ್ದಮೆ ದಾಖಲಿಸಿ, ಜಾತ್ರೆಗೆ ಅಡ್ಡಿ ಮಾಡದಂತೆ ಖಾಯಂ ನಿರ್ಬಂಧಕಾಜ್ಞೆ ನೀಡಬೇಕೆಂದು ನ್ಯಾಯಾಲಯವನ್ನು ಆಶ್ರಯಿಸಿದ್ದರು. ಜೊತೆಗೆ ಜಾತ್ರಾ ಅವಧಿಯಲ್ಲಿ ಯಾವುದೇ ರೀತಿಯ ಅಡ್ಡಿಪಡಿಸುವುದನ್ನು ತಡೆಯುವಂತೆ ಮಧ್ಯಂತರ ಅರ್ಜಿಯನ್ನೂ ಸಲ್ಲಿಸಿದ್ದರು. ಪ್ರತಿವಾದಿ ರಾಜು ಖಾನಪ್ಪನವರ ಅವರು ನ್ಯಾಯಾಲಯದಲ್ಲಿ ವಾದ ಮಂಡಿಸಿ, ತಾವು ಯಾವುದೇ ಅವಹೇಳನಕಾರಿ ಹೇಳಿಕೆ ನೀಡಿಲ್ಲ. ಜಾತ್ರೆಯಲ್ಲಿ ಹೊರ ರಾಜ್ಯದ ವ್ಯಾಪಾರಿಗಳಿಗೆ ಅವಕಾಶ ನೀಡುವುದರಿಂದ ಸ್ಥಳೀಯರಿಗೆ ನಷ್ಟವಾಗುತ್ತಿದೆ ಹಾಗೂ ಸಂಚಾರ ಸಮಸ್ಯೆಗಳು ಉಂಟಾಗುತ್ತಿವೆ. ಸಾರ್ವಜನಿಕ ಹಿತಾಸಕ್ತಿಗಾಗಿ ತಾವು ಹೋರಾಟ ನಡೆಸುತ್ತಿದ್ದೇನೆ ಎಂದು ವಿವರಿಸಿದರು.

ವಾದ–ಪ್ರತಿವಾದಗಳನ್ನು ಆಲಿಸಿದ ನ್ಯಾಯಾಲಯ, ವಾದಿ ಸಲ್ಲಿಸಿದ ದಾಖಲೆಗಳಲ್ಲಿ ಅವಹೇಳನಕಾರಿ ಹೇಳಿಕೆ ಸ್ಪಷ್ಟವಾಗಿ ಸಾಬೀತಾಗಿಲ್ಲ ಎಂದು ಅಭಿಪ್ರಾಯಪಟ್ಟಿತು. ಜೊತೆಗೆ ಸಲ್ಲಿಸಲಾದ ಸಿಡಿ ಮತ್ತು ಪೆನ್‌ಡ್ರೈವ್‌ಗಳಿಗೆ ಭಾರತೀಯ ಸಾಕ್ಷ್ಯಾಧಿನಿಯಮದ ಪ್ರಕಾರ ಪ್ರಮಾಣಪತ್ರ ಇಲ್ಲದ ಹಿನ್ನೆಲೆಯಲ್ಲಿ, ಪ್ರಕರಣದ ಸಂಪೂರ್ಣ ವಿಚಾರಣೆ ಅಗತ್ಯವಿದೆ ಎಂದು ತಿಳಿಸಿ ಮಧ್ಯಂತರ ತಡೆ ಅರ್ಜಿಯನ್ನು ವಜಾಗೊಳಿಸಿದೆ.

ಈ ಕುರಿತು ಪ್ರತಿಕ್ರಿಯಿಸಿದ ರಾಜು ಖಾನಪ್ಪನವರ, ನ್ಯಾಯಾಲಯದ ತೀರ್ಪನ್ನು ಸ್ವಾಗತಿಸುತ್ತಿದ್ದು, ಸಾರ್ವಜನಿಕ ಹಿತಾಸಕ್ತಿ ಹೋರಾಟವನ್ನು ಮುಂದುವರಿಸಲಾಗುವುದು ಎಂದು ತಿಳಿಸಿದ್ದಾರೆ.

### ಹುಯಿಲಗೋಳದ ಚಂದ್ರು ಕುರಿ ಭೀಕರ ಹತ್ಯೆಯ ಶಂಕೆ; ಹಿರಿಯ ಮಗನನ್ನು ಕಳೆದುಕೊಂಡು ಕುಟುಂಬದ ಆಕ್ರಂದನ!

# ಮದುವೆ ಕನಸು ಚೂರು: ಸುಟ್ಟ ಸ್ಥಿತಿಯಲ್ಲಿ ಯುವಕನ ಶವ ಪತ್ತೆ!

**■ ವಿಜಯಸಾಕ್ಷಿ ಸುದ್ದಿ, ಗದಗ**

ಇನ್ನೇನು ಕೆಲವೇ ದಿನಗಳಲ್ಲಿ ಮದುವೆಯಾಗಿ ಹೊಸ ಬದುಕು ಆರಂಭಿಸಬೇಕಿದ್ದ ಯುವಕನ ಕನಸು, ಕ್ಷಣಾರ್ಧದಲ್ಲಿ ಬೂದಿಯಾಗಿದೆಯೆನ್ನಿಸುವ ಘಟನೆ ಗದಗ ತಾಲೂಕಿನ ಹುಯಿಲಗೋಳ ಗ್ರಾಮದಲ್ಲಿ ನಡೆದಿದೆ.

28 ವರ್ಷದ ಚಂದ್ರು ಕುರಿ ಸುಟ್ಟ ಸ್ಥಿತಿಯಲ್ಲಿ ಶವವಾಗಿ ಪತ್ತೆಯಾಗಿದ್ದು, ಭೀಕರ ಹತ್ಯೆಯ ಶಂಕೆ ವ್ಯಕ್ತವಾಗಿದೆ.





ಸಂಗಪ್ಪ ಮತ್ತು ರೇಣವ್ವ ದಂಪತಿಗಳ ಹಿರಿಯ ಮಗನಾಗಿದ್ದ ಚಂದ್ರು, ಕುಟುಂಬದ ಭರವಸೆ. ಮನೆಗೆ ಆಧಾರವಾಗಿದ್ದ ಮಗನ ಮದುವೆ ಮಾಡಿ ಹರ್ಷದಿಂದ ಬದುಕು ಸಾಗಿಸಬೇಕೆಂಬ ಕನಸು ಕಂಡಿದ್ದ ಕುಟುಂಬಕ್ಕೆ, ಇದೀಗ ಅಸಹನೀಯ ದುಃಖ ಎದುರಾಗಿದೆ.

ಬುಧವಾರ ರಾತ್ರಿ ಯಾರಿಗೂ ಹೇಳದೆ ಮನೆಯಿಂದ ಹೊರಟ ಚಂದ್ರು, ಮತ್ತೆ ಮನೆ ಬಾಗಿಲು ತಟ್ಟಲಿಲ್ಲ. ಆತ ಮರಳುವ ನಿರೀಕ್ಷೆಯಲ್ಲಿ ಕಾದಿದ್ದ ಕಣ್ಣುಗಳು, ಕೊನೆಗೆ ಆಸ್ಪತ್ರೆಯ ಶವಗಾರದಲ್ಲಿ ಮಗನನ್ನು ಗುರುತಿಸಬೇಕಾದ ನೋವಿಗೆ ಗುರಿಯಾದವು.

ಗದಗ ತಾಲೂಕಿನ ಆಲಿಹಳ್ಳದ ಸೇತುವೆ ಕೆಳಗೆ ಸುಟ್ಟ ಸ್ಥಿತಿಯಲ್ಲಿ ಪತ್ತೆಯಾದ ಶವ, ಚಂದ್ರುವದ್ದೇ ಎಂಬುದು ದೃಢವಾದ ಕ್ಷಣ–ಕುಟುಂಬದವರ ಕಣ್ಣೀರು ನಿಲ್ಲಲಿಲ್ಲ.

"ನಮ್ಮ ಮಗನಿಗೆ ಮದುವೆ ಮಾಡಬೇಕಿತ್ತು ಈಗ ಅವನ ಮುಖ ನೋಡೋಕೆ ಕೂಡ ಸಾಧ್ಯವಾಗಿಲ್ಲ " ಎಂಬ ಹೆತ್ತವರ ಅಳಲು ಮನಕಲುಕುವಂತಿತ್ತು.

ಕುಟುಂಬದ ಆರೋಪದ ಪ್ರಕಾರ, ಚಂದ್ರುವನ್ನು ಮಾರಕಾಸ್ತ್ರಗಳಿಂದ ಹತ್ಯೆ ಮಾಡಿ, ಬಳಿಕ ಪೆಟ್ರೋಲ್ ಸುರಿದು ಸುಟ್ಟು ಹಾಕಲಾಗಿದೆ. ಈ ಭೀಕರ ಘಟನೆ ಇಡೀ ಗ್ರಾಮವನ್ನು ಬೆಚ್ಚಿಬೀಳುವಂತೆ ಮಾಡಿದೆ.

ಮದುವೆ ಸಂಭ್ರಮಕ್ಕಾಗಿ ಸಿದ್ಧವಾಗಿದ್ದ ಮನೆ, ಈಗ ಶೋಕ ಸಾಗರದಲ್ಲಿ ಮುಳುಗಿದೆ. ಮಗನ ನಗುವಿನ ಬದಲು ಮನೆಯೊಳಗೆ ಆಕ್ರಂದನ ಮಾತ್ರ ಕೇಳಿಸುತ್ತಿದೆ.

ಗದಗ ಗ್ರಾಮೀಣ ಪೊಲೀಸರು ಪ್ರಕರಣ ದಾಖಲಿಸಿಕೊಂಡು, ಆರೋಪಿಗಳ ಪತ್ತೆಗೆ ಶೋಧ ಮುಂದುವರೆಸಿದ್ದಾರೆ.

# ಸೇವಾಸ್ಫೂರ್ತಿ ಪ್ರಶಸ್ತಿಗೆ ವಿ.ಡಿ. ಸಿದ್ದನಗೌಡ್ರ ಆಯ್ಕೆ

**■ ವಿಜಯಸಾಕ್ಷಿ ಸುದ್ದಿ, ಮುಳಗುಂದ**



ಸಾಮಾಜಿಕ ಸೇವೆಯಲ್ಲಿ ತೊಡಗಿಸಿಕೊಂಡು ವಿಶಿಷ್ಟ ಗುರುತು ಮೂಡಿಸಿರುವ ವಿ.ಡಿ. ಸಿದ್ದನಗೌಡ್ರ ಅವರನ್ನು ರಾಜ್ಯ ಮಟ್ಟದ "ಸೇವಾಸ್ಫೂರ್ತಿ ಪ್ರಶಸ್ತಿ"ಗೆ ಆಯ್ಕೆ ಮಾಡಲಾಗಿದೆ.

ಧಾರವಾಡ ಭಾರತ ಜ್ಞಾನ ವಿಜ್ಞಾನ ಸಮಿತಿ ಕರ್ನಾಟಕ ಜಿಲ್ಲಾ ಘಟಕ ಹಾಗೂ ಪರಿಸರ ಪ್ರೇಮ ತಂಡ, ಧಾರವಾಡ ವತಿಯಿಂದ ಪ್ರತಿವರ್ಷ ನೀಡಲಾಗುವ ಈ ಪ್ರಶಸ್ತಿಗೆ, ವಿಜಯ ಕರ್ನಾಟಕ ದಿನಪತ್ರಿಕೆಯ ವರದಿಗಾರರಾಗಿರುವ ಹಾಗೂ ಸರಕಾರಿ ಮಾದರಿ ಕನ್ನಡ ಗಂಡು ಮಕ್ಕಳ ಶಾಲೆ ನಂ.1 ಮುಳಗುಂದದ ಎಸ್‌ಡಿಎಂಸಿ ಅಧ್ಯಕ್ಷರಾಗಿರುವ ವಿ.ಡಿ. ಸಿದ್ದನಗೌಡ್ರ ಅವರ ಸೇವಾ ಕಾರ್ಯಗಳನ್ನು ಪರಿಗಣಿಸಿ ಆಯ್ಕೆ ಮಾಡಲಾಗಿದೆ.

ಪ್ರಶಸ್ತಿ ಪ್ರದಾನ ಸಮಾರಂಭವು ಧಾರವಾಡದ ಪಾಟೀಲ ಪುಟ್ಟಪ್ಪ ಸಭಾಂಗಣದಲ್ಲಿ ನಡೆಯಲಿದ್ದು, ಈ ಸಂದರ್ಭದಲ್ಲಿ ವಿ.ಡಿ. ಸಿದ್ದನಗೌಡ್ರ ಅವರನ್ನು ಗೌರವಿಸಲಾಗುತ್ತದೆ.

### ಮಾಜಿ ಸೈನಿಕರ ಕಾವಲು– ಸಾರ್ವಜನಿಕರ ಮೆಚ್ಚುಗೆ

# ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ ಸೈನಿಕ ಶಿಸ್ತು!



**■ ವಿಜಯಸಾಕ್ಷಿ ಸುದ್ದಿ, ರೋಣ**

"ವಿದ್ಯಾರ್ಥಿಗಳಿಗೆ ಶಾಂತ ಮತ್ತು ಸುರಕ್ಷಿತ ವಾತಾವರಣ ಕಲ್ಪಿಸಲು ಮಾಜಿ ಸೈನಿಕರ ಸೇವೆ ಅತ್ಯಂತ ಮಹತ್ವದ್ದಾಗಿದೆ"

**– ಆರ್.ಎಸ್ ಬುರಡಿ,** ಡಿಡಿಪಿಐ

ರಾಜ್ಯಾದ್ಯಂತ ನಡೆಯುತ್ತಿರುವ ಎಸ್‌ಎಸ್‌ಎಲ್‌ಸಿ ಪರೀಕ್ಷೆಗಳ ಹಿನ್ನೆಲೆಯಲ್ಲಿ ಗದಗ ಜಿಲ್ಲೆಯ ರೋಣ ತಾಲೂಕಿನ ವಿವಿಧ ಪರೀಕ್ಷಾ ಕೇಂದ್ರಗಳಲ್ಲಿ ಶಿಸ್ತು ಹಾಗೂ ಭದ್ರತೆ ಕಾಪಾಡಲು ಮಾಜಿ ಸೈನಿಕರ ಸಂಘದ ಸದಸ್ಯರು ಸ್ವಯಂಪ್ರೇರಣೆಯಿಂದ ಸೇವೆ ಸಲ್ಲಿಸುತ್ತಿರುವುದು ಗಮನಾರ್ಹವಾಗಿದೆ.

ತಾಲೂಕಿನ ವಿವಿಧ ಗ್ರಾಮಗಳ ಮಾಜಿ ಸೈನಿಕರನ್ನು ಪರೀಕ್ಷಾ ಅವಧಿಯಲ್ಲಿ ನಿಯೋಜಿಸಲಾಗಿದ್ದು, ಅವರು ಪೊಲೀಸ್ ಹಾಗೂ ಶಿಕ್ಷಣ ಇಲಾಖೆಯ ಸಿಬ್ಬಂದಿಯೊಂದಿಗೆ ಕೈಜೋಡಿಸಿ ಪರೀಕ್ಷೆಗಳು ಸುಗಮವಾಗಿ ನಡೆಯಲು ಸಹಕರಿಸುತ್ತಿದ್ದಾರೆ.

ಕಳೆದ ಮೂರು ವರ್ಷಗಳಿಂದ ನಿರಂತರವಾಗಿ ಈ ಸೇವೆಯನ್ನು ಸಲ್ಲಿಸುತ್ತಿರುವುದು ವಿಶೇಷವಾಗಿದೆ. ಶನಿವಾರ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಉಪನಿರ್ದೇಶಕ ಆರ್.ಎಸ್. ಬುರಡಿ ಅವರು ಶ್ರೀ ವೀರಭದ್ರೇಶ್ವರ ಪ್ರೌಢಶಾಲೆಯ ಪರೀಕ್ಷಾ ಕೇಂದ್ರಕ್ಕೆ ಆಕಸ್ಮಿಕ ಭೇಟಿ ನೀಡಿದ ಸಂದರ್ಭದಲ್ಲಿ, ಕೇಂದ್ರದ ಮುಂಭಾಗ ಹಾಗೂ ಹಿಂಭಾಗಗಳಲ್ಲಿ ಮಾಜಿ ಸೈನಿಕರು ಪೊಲೀಸರಂತೆ ಪಹರೆ ನಿಂತು ವಿದ್ಯಾರ್ಥಿಗಳ ಪರೀಕ್ಷೆಗೆ ಯಾವುದೇ ಅಡಚಣೆ ಉಂಟಾಗದಂತೆ ಕಾವಲು ಕಾಯುತ್ತಿರುವುದು ಗಮನ ಸೆಳೆಯಿತು. ವಿದ್ಯಾರ್ಥಿಗಳಿಗೆ ಅನುಕೂಲಕರ ಹಾಗೂ ಶಾಂತ ವಾತಾವರಣ ನಿರ್ಮಿಸಲು ಮಾಜಿ ಸೈನಿಕರ ಸೇವೆ ಮಹತ್ವದ್ದಾಗಿದೆ ಎಂದು ಅಧಿಕಾರಿಗಳು ಅಭಿಪ್ರಾಯಪಟ್ಟಿದ್ದಾರೆ. ಈ ಕಾರ್ಯಕ್ಕೆ ಸಾರ್ವಜನಿಕರು ಹಾಗೂ ವಿವಿಧ ವಲಯಗಳಿಂದ ವ್ಯಾಪಕ ಮೆಚ್ಚುಗೆ ವ್ಯಕ್ತವಾಗುತ್ತಿದೆ.

ಮಾಜಿ ಸೈನಿಕರ ಸೇವಾಭಾವನೆಗೆ ಎಲ್ಲೆಡೆಯಿಂದ ಅಭಿನಂದನೆಗಳ ಮಹಾಪೂರವೇ ಹರಿದು ಬರುತ್ತಿದೆ.

### ದಿಂಗಾಲೇಶ್ವರ ಮಠದಲ್ಲಿ ದಾನಮ್ಮದೇವಿ ಪುರಾಣಕ್ಕೆ ಚಾಲನೆ ಕಾರ್ಯಕ್ರಮದಲ್ಲಿ ದಿಂಗಾಲೇಶ್ವರ ಸ್ವಾಮೀಜಿ

# ಪುರಾಣ–ಪುಣ್ಯಕಥೆಗಳು ಶಾಂತಿ ನೆಮ್ಮದಿಗೆ ದಾರಿದೀಪ!

**■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ**

ಜಾತ್ರಾ ಮಹೋತ್ಸವ ಹಿನ್ನೆಲೆ ನಿತ್ಯ ಪುರಾಣ ಪ್ರವಚನ ಆರಂಭ; ಧರ್ಮ–ಸಂಸ್ಕೃತಿ ಅರಿವಿಗೆ ಒತ್ತು.

**– ಡಾ. ಕರಿಬಸವ ರಾಜೇಂದ್ರ ಜಗದ್ಗುರುಗಳು.**

ತಾಲೂಕಿನ ಬಾಳೆಹೊಸೂರಿನ ಶ್ರೀ ದಿಂಗಾಲೇಶ್ವರ ಮಠದಲ್ಲಿ ಎಪ್ರಿಲ್ 7 ಮತ್ತು 8ರಂದು ನಡೆಯಲಿರುವ ಜಾತ್ರಾ ಮಹೋತ್ಸವದ ಹಿನ್ನೆಲೆಯಲ್ಲಿ, ಶನಿವಾರದಿಂದ ನಿತ್ಯ ಸಂಜೆ ಗುಡ್ಡಾಪುರ ದಾನಮ್ಮದೇವಿ ಪುರಾಣ ಕಾರ್ಯಕ್ರಮ ಆರಂಭಗೊಂಡಿತು.

ಪುರಾಣ ಪ್ರಾರಂಭೋತ್ಸವವನ್ನು ಆಂಧ್ರಪ್ರದೇಶದ ಉರವಕೊಂಡ ಉರಗಾದ್ರಿ ಸಂಸ್ಥಾನ ಗವಿಮಠದ ಡಾ. ಕರಿಬಸವ ರಾಜೇಂದ್ರ ಜಗದ್ಗುರುಗಳು ನೆರವೇರಿಸಿ ಆಶೀರ್ವಚನ ನೀಡಿದರು.

ದೇವರು, ಧರ್ಮ, ಸಂಸ್ಕೃತಿ, ಸಂಪ್ರದಾಯ ಹಾಗೂ ಮಾನವೀಯ ಮೌಲ್ಯಗಳಿಂದ ಕೂಡಿದ ಸುಸಂಸ್ಕೃತ ಸಮಾಜ ನಿರ್ಮಾಣಕ್ಕೆ ಪುರಾಣ, ಪುಣ್ಯಕಥೆಗಳು ಹಾಗೂ ಸತ್ಸಂಗ ಅಗತ್ಯವೆಂದು ಹೇಳಿದರು.

ಮಾನವನು ಬದುಕಿನ ಜಂಜಾಟಗಳ ಮಧ್ಯೆಯೂ ಧರ್ಮ, ಆಧ್ಯಾತ್ಮ ಮತ್ತು ಪುರಾಣಗಳನ್ನು ಅಳವಡಿಸಿಕೊಂಡು, ಶರಣ–ಶರಣೆಯರ ಚರಿತ್ರೆಗಳನ್ನು ಆಲಿಸುವ ಮೂಲಕ ಸನ್ಮಾರ್ಗದತ್ತ ಸಾಗಬೇಕು ಎಂದು ಅವರು ತಿಳಿಸಿದರು.

ಶ್ರೀಮಠದ ಶ್ರೀ ಫಕೀರ ದಿಂಗಾಲೇಶ್ವರ ಜಗದ್ಗುರುಗಳು ಸಾನಿಧ್ಯ ವಹಿಸಿ ಮಾತನಾಡಿ, ಶಾಂತಿ ಮತ್ತು ನೆಮ್ಮದಿಯ ಜೀವನಕ್ಕೆ ಪುರಾಣ–ಪುಣ್ಯಕಥೆಗಳು ದಾರಿದೀಪವಾಗಿವೆ. ಇಂದಿನ ತಾಂತ್ರಿಕ ಯುಗದಲ್ಲಿ ಮೊಬೈಲ್, ಟಿವಿ, ಕಂಪ್ಯೂಟರ್ ಪ್ರಭಾವದಿಂದ ಮಾನವ ಸಂಸ್ಕೃತಿ, ಧರ್ಮಾಚರಣೆಗಳಿಂದ ದೂರವಾಗುತ್ತಿರುವುದು ವಿಷಾದಕರ ಎಂದರು. ಜಮಖಂಡಿಯ ಜ್ಞಾನಯೋಗಿನಿ ಶ್ರೀದೇವಿ ಮಾತಾಜಿ ದಾನಮ್ಮದೇವಿ ಪುರಾಣ ಪ್ರವಚನ ನೀಡಿ, ದಾನಮ್ಮದೇವಿ ಭಕ್ತರ ಪಾಲಿನ ಭದ್ರದೇವತೆಯಾಗಿದ್ದು, ಅವರ ಜೀವನ ಶಿವತತ್ವದ ಪ್ರತೀಕವಾಗಿದೆ. ಪುರಾಣವನ್ನು ಆಲಿಸುವುದರಿಂದ ಶಾಂತಿ ಹಾಗೂ ನೆಮ್ಮದಿ ಲಭಿಸುತ್ತದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ವಿರೇಶ್ವರ ಪುಣ್ಯಾಶ್ರಮದ ಪುಟ್ಟರಾಜ ರೋಣ, ರುದ್ರೇಶ ಕರಡಕಲ್ಲ ಸಂಗೀತ ಸೇವೆ ಸಲ್ಲಿಸಿದರು.

ಕಾರ್ಯಕ್ರಮದಲ್ಲಿ ವಿರುಪಾಕ್ಷ ಶಾಸ್ತ್ರಿಗಳು, ಈಶ್ವರಯ್ಯ ಮಾದಾಪುರಮಠ, ಅಶೋಕ ಮಾಗಿ, ರೇಣುಕಸ್ವಾಮಿ ವೆಂಕಟಾಪುರಮಠ ಸೇರಿದಂತೆ ಗ್ರಾಮದ ಹಿರಿಯರು ಹಾಗೂ ಜಾತ್ರಾ ಸಮಿತಿಯ ಸದಸ್ಯರು ಉಪಸ್ಥಿತರಿದ್ದರು. ಹುಬ್ಬಳ್ಳಿಯ ಪ್ರಭಾವತಿ ಹಿರೇಮಠ ಕಾರ್ಯಕ್ರಮ ನಿರೂಪಿಸಿದರು.



# ದಾವಣಗೆರೆ ಉಪಚುನಾವಣೆ: ಸಂಜಯ ದೊಡ್ಡಮನಿಗೆ ಪ್ರಚಾರದ ಉಸ್ತುವಾರಿ

**■ ವಿಜಯಸಾಕ್ಷಿ ಸುದ್ದಿ, ಗದಗ**



ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಉಪಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು, ಕೆಪಿಸಿಸಿ ಸದಸ್ಯರು ಹಾಗೂ ಗದಗ ಜಿಲ್ಲಾ ಪರಿಶಿಷ್ಟ ಜಾತಿ ವಿಭಾಗದ ಮಾಧ್ಯಮ ವಕ್ತಾರರಾದ ಸಂಜಯ ಆರ್ ದೊಡ್ಡಮನಿ ಅವರನ್ನು ಚುನಾವಣಾ ಪ್ರಚಾರ ಉಸ್ತುವಾರಿಗಳಾಗಿ ನೇಮಕ ಮಾಡಲಾಗಿದೆ.

ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಸಮರ್ಥ್ ಮಲ್ಲಿಕಾರ್ಜುನ್ ಶಾಮನೂರು ಅವರ ಗೆಲುವಿಗಾಗಿ ಸಮರ್ಪಕವಾಗಿ ಕಾರ್ಯನಿರ್ವಹಿಸುವಂತೆ ಕೆಪಿಸಿಸಿ ರಾಜ್ಯಾಧ್ಯಕ್ಷರು ಹಾಗೂ ಉಪಮುಖ್ಯಮಂತ್ರಿಗಳಾದ ಡಿ.ಕೆ. ಶಿವಕುಮಾರ್ ಮತ್ತು ಎಸ್.ಸಿ ಘಟಕದ ರಾಜ್ಯಾಧ್ಯಕ್ಷ ಆರ್. ಧರ್ಮಸೇನ್ ಸೂಚನೆ ನೀಡಿದ್ದಾರೆ.

ಪಕ್ಷದ ಪ್ರಚಾರವನ್ನು ಮತ್ತಷ್ಟು ಬಲಪಡಿಸುವ ಉದ್ದೇಶದಿಂದ ರಾಜ್ಯದ ವಿವಿಧ ಜಿಲ್ಲೆಗಳಿಗೆ ಪ್ರತ್ಯೇಕ ಜವಾಬ್ದಾರಿಗಳನ್ನು ಹಂಚಲಾಗಿದ್ದು, ಪ್ರತಿಯೊಬ್ಬರೂ ಅಭ್ಯರ್ಥಿಯ ಗೆಲುವಿಗಾಗಿ ಶ್ರಮಿಸಬೇಕೆಂದು ನಾಯಕರು ಕರೆ ನೀಡಿದ್ದಾರೆ.

ಸಂಜಯ ಆರ್ ದೊಡ್ಡಮನಿ ಅವರಿಗೆ ನೀಡಿರುವ ಈ ಮಹತ್ವದ ಜವಾಬ್ದಾರಿಯಡಿಯಲ್ಲಿ ಚುನಾವಣಾ ಪ್ರಚಾರ, ಮಾಧ್ಯಮ ಸಂಪರ್ಕ ಮತ್ತು ಪಕ್ಷದ ಸಂದೇಶವನ್ನು ಜನರಿಗೆ ಪರಿಣಾಮಕಾರಿಯಾಗಿ ತಲುಪಿಸುವ ಕಾರ್ಯವನ್ನು ನಿಭಾಯಿಸಲು ಸೂಚಿಸಲಾಗಿದೆ.

# ಕೆ.ವಿ. ಹಂಚಿನಾಳ ನರ್ಸಿಂಗ್ ಕಾಲೇಜಿನಲ್ಲಿ ಪ್ರತಿಜ್ಞೆ ಕಾರ್ಯಕ್ರಮ



**■ವಿಜಯಸಾಕ್ಷಿ ಸುದ್ದಿ, ಗದಗ**

ಕೆ.ವಿ. ಹಂಚಿನಾಳ ಕಾಲೇಜ್ ಆಫ್ ನರ್ಸಿಂಗ್ ವತಿಯಿಂದ ಬಿ.ಎಸ್ಸಿ ನರ್ಸಿಂಗ್ ಪ್ರಥಮ ವರ್ಷದ ವಿದ್ಯಾರ್ಥಿಗಳಿಗಾಗಿ ಪ್ರತಿಜ್ಞೆ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ಜ್ಯೋತಿ ಬೆಳಗಿಸಿ ನರ್ಸಿಂಗ್ ಅಧ್ಯಯನದ ಪ್ರತಿಜ್ಞೆಯನ್ನು ಸ್ವೀಕರಿಸಿದರು. ಮುಖ್ಯ ಅತಿಥಿಯಾಗಿ ಆಗಮಿಸಿದ ಆರ್.ಜಿ.ಯು.ಹೆಚ್.ಎಸ್., ಬೆಂಗಳೂರು ಸಂಸ್ಥೆಯ ಮಾಜಿ ನರ್ಸಿಂಗ್ ಡೀನ್ ಡಾ. ಮಹೇಶ್ ಅವರು ನರ್ಸಿಂಗ್ ಶಿಕ್ಷಣದ ಮಹತ್ವದ ಕುರಿತು ಮಾಹಿತಿ ನೀಡಿದರು.

ಇನ್ಸೋರ್ವ ಅತಿಥಿಯಾಗಿ ಭಾಗವಹಿಸಿದ ಆರ್.ಜಿ.ಯು.ಹೆಚ್.ಎಸ್. ಬಿ.ಓ.ಎಸ್. ಅಧ್ಯಕ್ಷ ಡಾ. ತಿಪ್ಪೇಸ್ವಾಮಿ ಅವರು ಮಾತನಾಡಿ, ನರ್ಸಿಂಗ್ ವೃತ್ತಿಯಿಂದ ಉತ್ತಮ ಭವಿಷ್ಯ ರೂಪಿಸಿಕೊಳ್ಳಬಹುದು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಸಂಸ್ಥೆಯ ಕಾರ್ಯದರ್ಶಿ ಡಾ. ವಿರೇಶ್ ಕೆ. ಹಂಚಿನಾಳ, ಆಡಳಿತಾಧಿಕಾರಿ ಸಚಿನ್ ಭುಸದ, ಪ್ರಾಚಾರ್ಯರಾದ ಶ್ರೀಮತಿ ವೇದಶ್ರೀ ಹಾಗೂ ಸಿಬ್ಬಂದಿ ವರ್ಗ ಹಾಜರಿದ್ದರು.

# ಇಂದಿನ ದಿನಗಳಲ್ಲಿ ಭಕ್ತಿ ಆಡಂಬರವಾಗಿ, ಆಚರಣೆ ಶ್ರೀಮಂತವಾಗುತ್ತಿದೆ!

## ಶ್ರೀ ಅನ್ನದಾನೇಶ್ವರ ಮಂಟಪದಲ್ಲಿ 71ನೆ ಶಿವಾನುಭವಗೋಷ್ಠಿಯಲ್ಲಿ ಪ್ರಕಾಶ್ ಮಾಚೇನಹಳ್ಳಿ ಅಭಿಮತ

> "ಧರ್ಮವು ಜೀವನದ ಪ್ರತಿ ಹಂತದಲ್ಲಿಯೂ ಇದೆ. ಅದನ್ನು ಆಚರಿಸುವಲ್ಲಿ ನಾವು ಎಡವುತ್ತಿದ್ದೇವೆ. ಇನ್ನಾದರೂ ಎಚ್ಚರಗೊಂಡು ಧರ್ಮವೆಂದರೇನು? ಅದರ ಪಾಲನೆ ಹೇಗೆ? ಎಂಬುದನ್ನು ಗುರುಗಳಿಂದ ತಿಳಿದುಕೊಂಡು ಆಚರಿಸಿದ್ದೇ ಆದರೆ ಶರಣ ಸಂಸ್ಕೃತಿ ನಮ್ಮಲ್ಲಿ ತಾನೇ ತಾನಾಗಿ ಒಡಮೂಡುತ್ತದೆ"
> – **ಪ್ರಕಾಶ ಮಾಚೇನಹಳ್ಳಿ**



**■ವಿಜಯಸಾಕ್ಷಿ ಸುದ್ದಿ, ನರೇಗಲ್ಲ**

ಜಗತ್ತಿನ ಯಾವುದೇ ಧರ್ಮವು ಹಿಂಸೆಯನ್ನು ಬೋಧಿಸುವುದಿಲ್ಲ. ತಪ್ಪಾಗಿ ಅರ್ಥೈಸಿಕೊಳ್ಳುವ ನಾವುಗಳೇ ಹಿಂಸೆಯೆಡೆಗೆ ಓಡುತ್ತಿದ್ದೇವೆ. ಎಲ್ಲ ಧರ್ಮಗಳ ಮೂಲಮಂತ್ರವು ದಯೆ ಆಗಿದೆ. ಆದ್ದರಿಂದಲೇ ಬಸವಣ್ಣನವರು ದಯೆಯೇ ಧರ್ಮದ ಮೂಲವಯ್ಯ ಎಂದಿದ್ದಾರೆ ಎಂದು ಎಂಜಿಆರ್‌ಡಿಪಿಆರ್ ವಿವಿಯ ಎನ್‌ಎಸ್‌ಎಸ್ ಕಾರ್ಯಕ್ರಮ ಸಂಯೋಜನಾಧಿಕಾರಿ ಪ್ರಕಾಶ್ ಮಾಚೇನಹಳ್ಳಿ ಹೇಳಿದರು.

ಪಟ್ಟಣದ ಶ್ರೀ ಅನ್ನದಾನೇಶ್ವರ ಮಂಟಪದಲ್ಲಿ ಅಕ್ಷರ ಭಾರತ ಪ್ರತಿಷ್ಠಾನ ಮತ್ತು ಎಸ್‌ಎವಿವಿಪಿ ಸಮಿತಿಗಳು ಏರ್ಪಡಿಸಿದ್ದ 71ನೆ ಶಿವಾನುಭವಗೋಷ್ಠಿಯಲ್ಲಿ ಅವರು ಶರಣರು ಮತ್ತು ಭಕ್ತಿ ಪಂಥದ ಜೀವನ ಮೌಲ್ಯಗಳು ಕುರಿತು ಉಪನ್ಯಾಸ ನೀಡಿದರು.

ವಚನಗಳು ನಮ್ಮ ಜೀವನಕ್ಕೆ ಕನ್ನಡಿಗಳಾಗಿವೆ. ವಚನಗಳನ್ನು ಸರಿಯಾಗಿ ಅರ್ಥೈಸಿಕೊಂಡರೆ ಬದುಕು ಬಂಗಾರವಾಗುತ್ತದೆ. ಶರಣರ ವಚನಗಳು ಜೀವನದ ಸಾರವನ್ನು ತಿಳಿಸಿದರೆ, ದಾಸರ ಕೀರ್ತನೆಗಳು ನಮ್ಮಲ್ಲಿ ಭಕ್ತಿಯನ್ನು ಹುಟ್ಟಿಸುತ್ತವೆ. ಆದರೆ ಇಂದಿನ ದಿನಗಳಲ್ಲಿ ಭಕ್ತಿ ಆಡಂಬರವಾಗುತ್ತಿದೆ, ಆಚರಣೆ ಶ್ರೀಮಂತವಾಗುತ್ತಿದೆ. ನಮ್ಮಲ್ಲಿ ಮಾನವೀಯ ಮೌಲ್ಯಗಳು ಕುಸಿಯುತ್ತಿರುವುದರಿಂದ ನೈತಿಕತೆ ಕಡಿಮೆಯಾಗುತ್ತಿದೆ ಎಂದು ವಿಷಾದ ವ್ಯಕ್ತಪಡಿಸಿದರು.

ಶರಣರು ವಚನಗಳ ಮೂಲಕ ಜನರನ್ನು ತಿದ್ದುವುದರ ಜೊತೆಗೆ ತಮ್ಮ ಆತ್ಮ ಸಾಕ್ಷಾತ್ಕಾರವನ್ನು ಮಾಡಿಕೊಳ್ಳುತ್ತಿದ್ದರು. ನುಡಿದಂತೆ ನಡೆದರೆ ಜೀವನ ಪಾವನವಾಗುತ್ತದೆ. ಕೃತಿ ಮತ್ತು ಕಾರ್ಯ ಒಂದಾದರೆ ಬದುಕು ಸಾರ್ಥಕವಾಗುತ್ತದೆ. ಅದರಡೆಗೆ ಯಾರದೂ ಗಮನವಿಲ್ಲ. ಶರಣ ಸಂಸ್ಕೃತಿ ನಮ್ಮಲ್ಲಿ ಬೆಳೆಯಬೇಕಾದರೆ ನಾವು ವಚನಗಳನ್ನು ಅರ್ಥೈಸಿಕೊಂಡು, ಅವುಗಳ ಆಚರಣೆಯನ್ನು ನಿತ್ಯದ ಜೀವನದಲ್ಲಿ ತರಬೇಕೆಂದರು.

ಸಾನಿಧ್ಯ ವಹಿಸಿದ್ದ ಶ್ರೀ ಮುಪ್ಪಿನ ಬಸವಲಿಂಗ ಸ್ವಾಮೀಜಿ ಆಶೀರ್ವಚನ ನೀಡಿ, ಜೀವನವೇ ಒಂದು ಮೌಲ್ಯವಾಗಿದೆ. ಅದನ್ನು ಬದುಕಲು ಕಲಿಯಬೇಕು. ಈ ಜಗತ್ತಿನಲ್ಲಿ ಮನುಷ್ಯ ತನ್ನನ್ನು ತಾನು ಪ್ರೀತಿಸಿದಷ್ಟು ಬೇರೆ ಯಾರನ್ನೂ ಪ್ರೀತಿಸಲಾರ. ಪರಮ ಶಾಂತಿಯನ್ನು ಗಳಿಸುವುದೇ ಶರಣರ ಮೂಲ ಗುರಿಯಾಗಿತ್ತು. ಸಮಾಧಾನದಿಂದ ಬದುಕುವುದನ್ನು ಭಕ್ತಿ ಪಂಥ ಹೇಳಿದರೆ, ವಚನಗಳು ಮಾನವೀಯ ಮೌಲ್ಯಗಳ ಬಗ್ಗೆ ಹೇಳುತ್ತವೆ. ಆದ್ದರಿಂದ ಎರಡನ್ನೂ ಸರಿಯಾಗಿ ತಿಳಿದುಕೊಂಡು ಜೀವನವನ್ನು ಸಾರ್ಥಕ ಮಾಡಿಕೊಳ್ಳಬೇಕೆಂದರು.

# ದೇವತೆಗಳಿಗೆ ಮಹಿಳೆಯರಿಂದ ಉಡಿ ತುಂಬುವ ಸಂಭ್ರಮ!



**■ವಿಜಯಸಾಕ್ಷಿ ಸುದ್ದಿ, ಗದಗ**

ನಗರದ ತಳಗೇರಿ ಓಣಿಯಲ್ಲಿ ನಡೆಯುತ್ತಿರುವ ಶ್ರೀ ವಿಜಯದುರ್ಗಾದೇವಿ ಗೋಪುರ ಲೋಕಾರ್ಪಣೆ ಹಾಗೂ ಕಳಸ ಪ್ರತಿಷ್ಠಾಪನೆಯ ಧಾರ್ಮಿಕ ಕಾರ್ಯಕ್ರಮಗಳು ಮೂರನೇ ದಿನವೂ ಭಕ್ತಿ-ಭಾವದಿಂದ ಮುಂದುವರಿದವು.

ಈ ಅಂಗವಾಗಿ ಓಣಿಯ ಮಹಿಳೆಯರು ಸಂಪ್ರದಾಯಬದ್ಧವಾಗಿ ಕುಂಕುಮ, ಅರಿಶಿನ, ಸೀರೆ, ಬಳೆ ಸೇರಿದಂತೆ ಉಡಿತುಂಬುವ ಸಾಮಗ್ರಿಗಳನ್ನು ಹೊತ್ತುಕೊಂಡು ಓಣಿಯಲ್ಲಿರುವ ಹೆಣ್ಣು ದೇವತೆಗಳಿಗೆ ಉಡಿ ತುಂಬುವ ಕಾರ್ಯಕ್ರಮದಲ್ಲಿ ಭಕ್ತಿಪೂರ್ವಕವಾಗಿ ಭಾಗವಹಿಸಿದರು. ಮನೆ ಮನೆಗಳಲ್ಲಿರುವ ದೇವತೆಗಳಿಗೆ ಪೂಜೆ ಸಲ್ಲಿಸಿ, ಕುಟುಂಬದ ಸುಖ-ಶಾಂತಿ ಹಾಗೂ ಸಮೃದ್ಧಿಗಾಗಿ ಪ್ರಾರ್ಥಿಸಿದರು. ಮಹಿಳೆಯರು ಒಟ್ಟಾಗಿ ಸೇರಿ ದೇವರ ಆರಾಧನೆ ನಡೆಸಿದ ದೃಶ್ಯಗಳು ಓಣಿಯಲ್ಲಿ ವಿಶೇಷ ಮೆರುಗು ತಂದವು. ತಮ್ಮ ಆಸೆ-ಆಕಾಂಕ್ಷೆಗಳನ್ನು ದೇವಿಯ ಮುಂದೆ ಇಟ್ಟು ಆಶೀರ್ವಾದ ಕೋರಿದ ಮಹಿಳೆಯರು ಸಂಪ್ರದಾಯವನ್ನು ಉಳಿಸಿ ಬೆಳೆಸುವಲ್ಲಿ ತಮ್ಮ ಪಾತ್ರವನ್ನು ಮೆರೆದರು.

ಈ ಸಂದರ್ಭದಲ್ಲಿ ಶಾಂತ ಪರಸಪ್ಪ ಗೌಡರ, ಲಕ್ಷ್ಮವ್ವ ಗೌಡರ, ದೀಪಾ ಪರಾಪುರ, ದಂಡಕ್ಕ ಬಳ್ಳಾರಿ, ರೇಣುಕಾ ಬಳ್ಳಾರಿ, ಸುನೀತಾ ಗೌಡರ, ಲಕ್ಷ್ಮವ್ವ ಬಳ್ಳಾರಿ, ಪದ್ಮಾ ಕಿನ್ನಾರಿ, ನಾಗಮ್ಮ, ಯಶೋಧ ಬಳ್ಳಾರಿ, ಲೂಲಾಕ್ಷಿ, ಉಮಾ ರಾಮಗಿರಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.

# ಪಠ್ಯಪುಸ್ತಕಗಳಲ್ಲಿ ಬೀಚಿ ಸಾಹಿತ್ಯ ಅಳವಡಿಕೆಯಾಗಲಿ

**■ವಿಜಯಸಾಕ್ಷಿ ಸುದ್ದಿ, ನರೇಗಲ್ಲ**

ಏಕತಾನತೆಯಿಂದ ಕೂಡಿರುವ ಪಠ್ಯಪುಸ್ತಕಗಳಲ್ಲಿನ ಪಠ್ಯವನ್ನು ಬದಲಾಯಿಸುವ ಕಾಲ ಬಂದಿದೆ. ಇದನ್ನು ಪಠ್ಯಪುಸ್ತಕ ಸಮಿತಿಯವರು ಗಮನಿಸಿ ಹಾಸ್ಯ ಸಾಹಿತಿ ಬೀಚಿಯವರ ಸಾಹಿತ್ಯವನ್ನು ಪಠ್ಯಪುಸ್ತಕಗಳಲ್ಲಿ ಅಳವಡಿಸಬೇಕು ಎಂದು ಡಯಟ್‌ನ ನಿವೃತ್ತ ಪ್ರಾಧ್ಯಾಪಕ ಕಾಶಿನಾಥ ಸಾಲಿಮಠ ಹೇಳಿದರು.

ಪಟ್ಟಣದ ಹಿರೇಮಠ ಸಭಾಭವನದಲ್ಲಿ ಜರುಗಿದ ಬೀಚಿ ಬಳಗದ ಮಾಸಿಕ ಸಭೆಯಲ್ಲಿ ಕನ್ನಡ ಸಾಹಿತ್ಯದ ಕುರಿತು ಉಪನ್ಯಾಸ ನೀಡಿದ ಅವರು, ಮಕ್ಕಳಿಗೆ ಓದಿಗೆ ಪೂರಕವಾಗುವ, ಅವರಲ್ಲಿ ಚೈತನ್ಯ ತುಂಬುವ ಅನೇಕ ವಿಷಯಗಳು ಬೀಚಿಯವರ ಸಾಹಿತ್ಯದಲ್ಲಿದೆ. ಇದನ್ನು ಪಠ್ಯಪುಸ್ತಕದಲ್ಲಿ ಅಳವಡಿಸುವುದರಿಂದ ಮಕ್ಕಳಿಗೆ ಓದಿನಲ್ಲಿ ಆಸಕ್ತಿ ಹೆಚ್ಚಾಗುತ್ತದೆ. ಬೀಚಿ ಎಲ್ಲ ವಯೋಮಾನದವರೂ ಓದುವಂತಹ ಅನೇಕ ಕೃತಿಗಳನ್ನು ರಚಿಸಿದ್ದಾರೆ. ಅವುಗಳ ಕಡೆಗೆ ಗಮನ ನೀಡಿ ಪಠ್ಯಪುಸ್ತಕ ಸಿದ್ಧತೆ ಮಾಡುವಂತಾಗಬೇಕೆಂದು ಸಾಲಿಮಠ ಅಭಿಪ್ರಾಯಪಟ್ಟರು.

ನಿವೃತ್ತ ಶಿಕ್ಷಕ ಎಂ. ಎಸ್. ಧಡೇಸೂರಮಠ ಮಾತನಾಡಿ, ಜನಪದ ಸಾಹಿತ್ಯ ಅತ್ಯಂತ ಸೊಗಡಿನಿಂದ ಕೂಡಿದ ಸಾಹಿತ್ಯವಾಗಿದೆ. ಅದನ್ನು ಮಕ್ಕಳಿಗೆ ತಿಳಿಸಿದರೆ ಮುಂದೆ ಅವರು ಜೀವನದಲ್ಲಿ ಹೇಗೆ ಬದುಕಬೇಕೆಂಬುದನ್ನು ಕಲಿಯುತ್ತಾರೆ ಎಂದರು. ನಿವೃತ್ತ ಮುಖ್ಯ ಶಿಕ್ಷಕ ಅರುಣ ಕುಲಕರ್ಣಿ ಮಾತನಾಡಿ, ಬೀಚಿ ಬಳಗವನ್ನು ಹುಟ್ಟು ಹಾಕಿದ್ದೆ ಎಲ್ಲರಲ್ಲಿಯೂ ಓದುವ ಹವ್ಯಾಸವನ್ನು ಬೆಳೆಸಲು. ಅದರೊಂದಿಗೆ ವೇದಿಕೆಯಲ್ಲಿ ಎಲ್ಲರೂ ಮಾತನಾಡಲಿ ಎಂದು. ಇದರ ಸದುಪಯೋಗವನ್ನು ಬಳಗದ ಎಲ್ಲ ಸದಸ್ಯರೂ ಪಡೆದುಕೊಳ್ಳಬೇಕೆಂದರು.

ಅಧ್ಯಕ್ಷ ಶಿವಯೋಗಿ ಜಕ್ಕಲಿ ಮಾತನಾಡಿ, ಮುಂದಿನ ತಿಂಗಳಿನಲ್ಲಿ ಮನೆಮನೆಗಳಲ್ಲಿ, ಓಣಿಗಳಲ್ಲಿ ಬೀಚಿ ಸಾಹಿತ್ಯವನ್ನು ಪರಿಚಯಿಸುವಂತಹ ಅನೇಕ ಕಾರ್ಯಕ್ರಮಗಳನ್ನು ರೂಪಿಸೋಣ ಎಂದರು.

ಸಭೆಯಲ್ಲಿ ಗುರುಪಾದಪ್ಪ ಬೆಲ್ಲದ, ಡಾ. ರಾಜೇಂದ್ರ ಗಚ್ಚಿನಮಠ, ಡಾ. ಲಿಂಗಯ್ಯ ಗೌರಿಮಠ, ಬಸವರಾಜ ಕುರಿ, ಶಿವಪುತ್ರಪ್ಪ ಸಂಗನಾಳ, ವೀರಭದ್ರಪ್ಪ ಕುಂಬಾರ, ಈಶ್ವರ ಬೆಟಗೇರಿ, ಬಿ. ಟಿ. ತಾಳಿ, ಸಂಗಯ್ಯ ಪ್ರಭುಸ್ವಾಮಿಮಠ, ಬಸಪ್ಪ ಉಪ್ಪಿನ, ದೊಡ್ಡಯ್ಯ ಅರವಟಗಿಮಠ ಮುಂತಾದವರು ಉಪಸ್ಥಿತರಿದ್ದರು.




# ಸಾವಿರಾರು ಭಕ್ತರ ನಡುವೆ ಶ್ರೀ ಆಂಜನೇಯಸ್ವಾಮಿ ನೂತನ ಮಹಾರಥೋತ್ಸವ



**■ವಿಜಯಸಾಕ್ಷಿ ಸುದ್ದಿ, ಹಗರಿಬೊಮ್ಮನಹಳ್ಳಿ**

ತಾಲೂಕಿನ ಬಾಚಿಗೊಂಡನ ಹಳ್ಳಿ-2 ಗ್ರಾಮದಲ್ಲಿ ಆರಾಧ್ಯ ದೈವ ಶ್ರೀ ಆಂಜನೇಯಸ್ವಾಮಿ ದೇವರ ನೂತನ ಮಹಾರಥೋತ್ಸವವು ಭಕ್ತಿ, ಶ್ರದ್ಧೆ ಹಾಗೂ ವೈಭವದಿಂದ ಸಾವಿರಾರು ಭಕ್ತರ ಸಮ್ಮುಖದಲ್ಲಿ ಜರುಗಿತು.

ತುಂಗಭದ್ರಾ ಅಣೆಕಟ್ಟು ನಿರ್ಮಾಣದ ಬಳಿಕ ಸ್ಥಳಾಂತರಗೊಂಡ ಈ ಗ್ರಾಮದ ಹಳೆಯ ತೇರು ಶಿಥಿಲಾವಸ್ಥೆಯಲ್ಲಿದ್ದ ಹಿನ್ನೆಲೆಯಲ್ಲಿ, ಗ್ರಾಮಸ್ಥರು ದೇಣಿಗೆ ಸಂಗ್ರಹಿಸಿ ನೂತನ ರಥ ನಿರ್ಮಾಣಕ್ಕೆ ಮುಂದಾಗಿದ್ದು, ಭಕ್ತಿಭಾವ ಮೆರೆದಿದ್ದಾರೆ. ಹಗರಿಬೊಮ್ಮನಹಳ್ಳಿಯ ಶಿಲ್ಪಿ ಸಿದ್ದಪ್ಪ ಚಿತ್ರಗಾರ ಅವರು ಸಂಪ್ರದಾಯಬದ್ಧ ಶೈಲಿಯಲ್ಲಿ ಆಕರ್ಷಕವಾಗಿ ರಥವನ್ನು ನಿರ್ಮಿಸಿದ್ದಾರೆ.

ಶ್ರೀ ರಾಮನವಮಿ ಅಂಗವಾಗಿ ಬೆಳಗಿನ ಜಾವ ಹೋಮ, ಹವನ ಹಾಗೂ ರುದ್ರಾಭಿಷೇಕ ನೆರವೇರಿಸಲಾಯಿತು. ಬಳಿಕ ದಂಪತಿಗಳ ಸಮೇತ ವಿಶೇಷ ಪೂಜಾ ಕಾರ್ಯಕ್ರಮಗಳು ನಡೆದವು. ಸಂಜೆ ನಾಡಿನ ವಿವಿಧ ಮಠಾಧೀಶರ ಸಾನ್ನಿಧ್ಯದಲ್ಲಿ ಮಹಾರಥೋತ್ಸವ ವೈಭವದಿಂದ ನೆರವೇರಿತು.

ರಥೋತ್ಸವದ ನಂತರ ನಡೆದ ಧಾರ್ಮಿಕ ಕಾರ್ಯಕ್ರಮದಲ್ಲಿ ರಥ ನಿರ್ಮಾಣಕ್ಕೆ ದೇಣಿಗೆ ನೀಡಿದ ದಾನಿಗಳನ್ನು ಪೂಜ್ಯರಿಂದ ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ನಂದಿಪುರದ ಡಾ. ಮಹೇಶ್ವರ ಸ್ವಾಮಿ, ಹಾಲಸ್ವಾಮಿ, ಹಂಪಸಾಗರದ ಮಹದೇವ ತಾತನವರು, ಕಡ್ಲಬಾಳ ಗವಿಮಠದ ಶಾಂತವೀರ ಸ್ವಾಮಿಗಳು, ತೋಂಟದಾರ್ಯ ಮಠದ ಕಿರಿಯ ಸ್ವಾಮೀಜಿ, ಗಾಯತ್ರಿ ದೇವಸ್ಥಾನದ ಅರ್ಚಕ ವೆಂಕಟ ರಾಮರಾಜು ಸೇರಿದಂತೆ ಹಲವು ಧಾರ್ಮಿಕ ಮುಖಂಡರು ಉಪಸ್ಥಿತರಿದ್ದರು.

ಗ್ರಾಮದ ಮುಖಂಡರಾದ ಹೊಳಗುಂದಿ ಕೊಟ್ರಪ್ಪ, ನೇತಾಜಿಗೌಡ, ಶೇಖರಪ್ಪ, ಶ್ರೀಕಾಂತ ನೇತಾಜಿಗೌಡ, ವೀರಭದ್ರಪ್ಪ, ಸಣ್ಣಬಸಪ್ಪ ಗೊಂಡಬಾಳ, ಪಿತಾಂಬ್ರಪ್ಪ ನೆಂಬದಾರ, ಬಿ. ಸುರೇಶ, ಮಂಜುನಾಥ ಗೊಂಡಬಾಳ, ನಾಗರಾಜ ಗೊಂಡಬಾಳ, ರುದ್ರಪ್ಪ ಗೊಂಡಬಾಳ, ಜಿ. ಚೆನ್ನಪ್ಪ, ಹೇಮಂತಕುಮಾರ, ಆನಂದ ಹರಿಜನ, ಪರಶುರಾಮ, ಫಕೀರಪ್ಪ ದುರುಗಪ್ಪ, ದಾವಲಸಾಬ, ರಾಜೆಸಾಬ, ವಿರೇಶ ಚಿತ್ವಾಡಗಿ, ದುರುಗಪ್ಪ ಚಿತ್ವಾಡಗಿ ಸೇರಿದಂತೆ ಸರ್ವ ಸಮಾಜದ ಭಕ್ತರು ಭಾಗವಹಿಸಿದ್ದರು.

# ಸಣ್ಣತಾಂಡೆಯಲ್ಲಿ ವಿಶ್ವ ಕ್ಷಯರೋಗ ದಿನಾಚರಣೆ

## ಕ್ಷಯ ಮುಕ್ತ ಭಾರತ ಮಾಡುವಲ್ಲಿ ಇಲಾಖೆಯೊಂದಿಗೆ ಸಾರ್ವಜನಿಕರು ಕೈಜೋಡಿಸಿ– ಸಿದ್ದಪ್ಪ ಅಂಗದಾಳ



**■ವಿಜಯಸಾಕ್ಷಿ ಸುದ್ದಿ, ಗದಗ**

ಒಂದು ಕಾಲದಲ್ಲಿ ಟಿ.ಬಿ. ಕ್ಷಯರೋಗ ಎಂದರೆ ಜನರಲ್ಲಿ ಭಯದ ವಾತಾವರಣ ಇತ್ತು. ಆದರೆ ಇಂದು ಆರೋಗ್ಯ ಇಲಾಖೆ ನಿರಂತರವಾಗಿ ಅರಿವು ಮೂಡಿಸುವುದರಿಂದ ಮತ್ತು ತಿಳುವಳಿಕೆ ನೀಡುವ ಕಾರ್ಯಕ್ರಮಗಳ ಮೂಲಕ ಜನರಲ್ಲಿ ಕ್ಷಯದ ಬಗ್ಗೆ ಜಾಗೃತಿ ಮೂಡಿಸುತ್ತಿರುವುದರಿಂದ ಭಯಮುಕ್ತಗೊಳಿಸಲಾಗಿದೆ ಎಂದು ಅಡವಿಸೋಮಾಪೂರ ಆರೋಗ್ಯ ಮತ್ತು ಕ್ಷೇಮ ಕೇಂದ್ರದ ಆರೋಗ್ಯ ನಿರೀಕ್ಷಣಾಧಿಕಾರಿಗಳಾದ ಸಿದ್ದಪ್ಪ ಎನ್. ಲಿಂಗದಾಳ ಹೇಳಿದರು.

ಕರ್ನಾಟಕ ಸರ್ಕಾರ, ಜಿಲ್ಲಾ ಆಡಳಿತ, ಜಿಲ್ಲಾ ಪಂಚಾಯತಿ ಮತ್ತು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರ ಲಕ್ಕುಂಡಿ ಅಡವಿಸೋಮಾಪೂರ ಆರೋಗ್ಯ ಮತ್ತು ಕ್ಷೇಮ ಕೇಂದ್ರದ ಸಹಯೋಗದಲ್ಲಿ ಸಣ್ಣತಾಂಡೆಯಲ್ಲಿ ಏರ್ಪಡಿಸಲಾದ ವಿಶ್ವ ಕ್ಷಯರೋಗ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಕ್ಷಯರೋಗವು ಮೈಕ್ರೋ ಬ್ಯಾಕ್ಟೀರಿಯಂ ಟ್ಯೂಬರ್‌ಕ್ಯೂಲೋಸಿಸ್ ಎಂಬ ಸೂಕ್ಷ್ಮ ರೋಗಾಣುವಿನಿಂದ ಬರುತ್ತದೆ.

ಸಂಪೂರ್ಣ ಕ್ಷಯ ಮುಕ್ತ ಕರ್ನಾಟಕಕ್ಕೆ ಹೆಚ್ಚು ಸಮುದಾಯ ಕೈಜೋಡಿಸಬೇಕು ಎಂದರು.

ಕ್ಷಯರೋಗವನ್ನು ನಿರಂತರ ಚಿಕಿತ್ಸೆಯಿಂದ ಗುಣಪಡಿಸಬಹುದು. ಟಿಬಿಯು ಶ್ವಾಸಕೋಶಗಳಿಗಷ್ಟೇ ಅಲ್ಲದೇ ದೇಹದ ಇನ್ನಿತರ ಭಾಗಗಳಿಗೂ ಹರಡಬಹುದು. ಆದ್ದರಿಂದ ಕ್ಷಯರೋಗದ ಲಕ್ಷಣಗಳು ಎರಡು ವಾರ ಅಥವಾ ಅದಕ್ಕಿಂತ ಹೆಚ್ಚು ಕಾಲ ಸತತವಾದ ಕೆಮ್ಮು, ಜ್ವರ, ಅದರಲ್ಲೂ ಸಂಜೆ ವೇಳೆ ಜ್ವರ ಬರುವಿಕೆ, ಎದೆಯಲ್ಲಿ ನೋವು, ತೂಕ ಕಡಿಮೆ ಆಗುವುದು, ಹಸಿವಿಲ್ಲದಿರುವುದು, ಕಫದಲ್ಲಿ ರಕ್ತ ಬಿಳುವುದು ಇಂತಹ ಲಕ್ಷಣಗಳು ಯಾರಿಗಾದರೂ ಇದ್ದರೆ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಉಚಿತ ಕಫ ಪರೀಕ್ಷೆ ಮಾಡಿಸಿಕೊಳ್ಳಬೇಕು. ಕ್ಷಯರೋಗಕ್ಕೆ ಉಚಿತ ಚಿಕಿತ್ಸೆ ಪಡೆದು ಆರೋಗ್ಯ ಭಾಗ್ಯವನ್ನು ಪಡೆಯಬೇಕು ಎಂದು ಹೇಳಿದರು. ಚಿಕಿತ್ಸೆ 6 ರಿಂದ 9 ತಿಂಗಳು ಇರುತ್ತದೆ ಎಂದು ತಿಳಿಸಿದರು.

ಆರೋಗ್ಯ ನಿರೀಕ್ಷಣಾಧಿಕಾರಿಗಳಾದ ಎಸ್.ಬಿ. ಗಡಾದ ಅವರು ಕ್ಷಯ ರೋಗದ ಲಕ್ಷಣದ ಕುರಿತು ವಿವರಿಸಿದರು, ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶಿಕ್ಷಕರಾದ ಎಸ್.ಜಿ. ಅಮ್ಮಿನಬಾಯಿ ವಹಿಸಿದ್ದು, ಸಿದ್ದಪ್ಪ ಲಮಾಣಿ, ಮಂಜುಳಾ ಆರಿ, ಲಲಿತಾ ಅಂಗಡಿ, ಲಕ್ಷ್ಮೀ ಪೂಜಾರ, ಮುಂತಾದವರು ಇದ್ದರು.

# ಮಹಿಳೆಯರ ಸಾಧನೆಗೆ ಪ್ರೋತ್ಸಾಹ ಅಗತ್ಯ

## ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯಲ್ಲಿ ನ್ಯಾ. ಮಧುಸೂದನ್ ಅಭಿಮತ




**■ವಿಜಯಸಾಕ್ಷಿ ಸುದ್ದಿ, ಹಗರಿಬೊಮ್ಮನಹಳ್ಳಿ**

ಮಹಿಳೆಯರು ಶಿಕ್ಷಣ, ರಾಜಕೀಯ, ಸಾಮಾಜಿಕ, ಉದ್ಯೋಗ ಸೇರಿದಂತೆ ಅಂತರಿಕ್ಷ ಮತ್ತು ಬಾಹ್ಯಾಕಾಶ ಕ್ಷೇತ್ರಗಳಲ್ಲಿಯೂ ಮುಂಚೂಣಿಯಲ್ಲಿದ್ದು, ಅವರ ಸಾಧನೆಗಳನ್ನು ಪ್ರೋತ್ಸಾಹಿಸುವ ಕೆಲಸವನ್ನು ಪ್ರತಿಯೊಬ್ಬರೂ ಮಾಡಬೇಕು ಎಂದು ಹಗರಿಬೊಮ್ಮನಹಳ್ಳಿ ನ್ಯಾಯಾಲಯದ ಹಿರಿಯ ಸಿವಿಲ್ ನ್ಯಾಯಾಧೀಶರಾದ ಮಧುಸೂದನ್ ಹೇಳಿದರು.

ಪಟ್ಟಣದ ನ್ಯಾಯಾಲಯದಲ್ಲಿ ಆಯೋಜಿಸಿದ್ದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿ, ಮಹಿಳೆಯರು ಕಾನೂನು ಜ್ಞಾನವನ್ನು ಪಡೆದು ಹೆಚ್ಚಿನ ಸಂಖ್ಯೆಯಲ್ಲಿ ಕಾನೂನು ಸೇವಾ ಕ್ಷೇತ್ರದಲ್ಲಿ ತೊಡಗಿಸಿಕೊಳ್ಳಬೇಕು ಎಂದು ಕರೆ ನೀಡಿದರು.

ವಕೀಲರಾದ ಶ್ರೀಮತಿ ಶ್ರೀದೇವಿ ಹವಾಲ್ದಾರ್ ವಿಶೇಷ ಉಪನ್ಯಾಸ ನೀಡಿ, ಮಹಿಳೆಯರ ಹಕ್ಕುಗಳಿಗಾಗಿ ಹೋರಾಡಿದ ಲಾರ್ ಜೆಸ್ಕಿನ್ ಮುಂತಾದ ನಾಯಕರನ್ನು ಸ್ಮರಿಸಿ, ಮಹಿಳೆಯರಿಗೆ ಮತದಾನ ಹಕ್ಕು, ಸಮಾನ ವೇತನ ಹಕ್ಕು ದೊರಕಲು ನಡೆದ ಹೋರಾಟಗಳ ಮಹತ್ವವನ್ನು ವಿವರಿಸಿದರು.

ಇಂಜಿನಿಯರ್ ಆಗಿ ವಿದ್ಯಾಭ್ಯಾಸ ಪೂರ್ಣಗೊಳಿಸಿ ಇನ್ಫೋಸಿಸ್ ಸಂಸ್ಥೆಯನ್ನು ನಿರ್ಮಾಣದಲ್ಲಿ ಪ್ರಮುಖ ಪಾತ್ರವಹಿಸಿರುವ ಸುಧಾಮೂರ್ತಿ ಅವರು ಲಕ್ಷಾಂತರ ಜನರಿಗೆ ಉದ್ಯೋಗಾವಕಾಶ ಕಲ್ಪಿಸಿರುವುದನ್ನು ಉದಾಹರಿಸಿದರು. ದೇಶದಲ್ಲಿ ಮಹಿಳೆಯರಿಗೆ 33% ಮೀಸಲಾತಿ ಕಲ್ಪಿಸಿರುವುದು ಸ್ಫೂರ್ತಿದಾಯಕ ಬೆಳವಣಿಗೆಯಾಗಿದ್ದು, ಮಹಿಳೆಯರು ಅದನ್ನು ಸದ್ಬಳಕೆ ಮಾಡಿಕೊಳ್ಳಬೇಕು ಎಂದು ತಿಳಿಸಿದರು.

ರಾಜ್ಯ ವಕೀಲರ ಸಂಘದಲ್ಲಿ ಮಹಿಳಾ ವಕೀಲರಿಗೆ ಹೆಚ್ಚಿನ ಆದ್ಯತೆ ದೊರಕುವಂತಾಗಬೇಕು ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಸಿವಿಲ್ ನ್ಯಾಯಾಧೀಶರಾದ ಸಯ್ಯದ್ ಮೊಹಿದ್ದೀನ್, ಸರ್ಕಾರಿ ಅಭಿಯೋಜಕ ಟಿ. ರಾಘವೇಂದ್ರ, ವಕೀಲರ ಸಂಘದ ಅಧ್ಯಕ್ಷ ಕೊಟ್ರೇಶ್ ಶೆಟ್ಟರ್ ಸೇರಿದಂತೆ ಹಿರಿಯ ವಕೀಲರಾದ ವಿಶಾಲಾಕ್ಷಮ್ಮ, ಅಶೋಕ್ ಕನಕೇರಿ, ಜಾಣ ಶಿವಾನಂದ, ಲಿಂಗನಗೌಡ್ರು, ಪಿ. ರಮೇಶ್ ಅವರು ತಮ್ಮ ಅಭಿಪ್ರಾಯಗಳನ್ನು ಹಂಚಿಕೊಂಡರು.

ಹಿರಿಯ ವಕೀಲರಾದ ವಿಶಾಲಾಕ್ಷಮ್ಮ ಅವರನ್ನು ಇದೇ ಸಂದರ್ಭದಲ್ಲಿ ಸನ್ಮಾನಿಸಲಾಯಿತು.

ವಕೀಲರ ಸಂಘದ ಉಪಾಧ್ಯಕ್ಷ ಬಿಎಂ ಆಂಜನೇಯ, ಕಾರ್ಯದರ್ಶಿ ಡಿ. ಮಂಜಣ್ಣ, ಜಂಟಿ ಕಾರ್ಯದರ್ಶಿ ಕೆ. ಪ್ರಹ್ಲಾದ್, ಖಜಾಂಚಿ ಕೆ. ಪೂರ್ಣಿಮಾ ಹಾಗೂ ಯಾಸ್ಮಿನ್, ಅಖಿಲಾ, ಶೀಲಾ, ಶಿವಗಂಗಮ್ಮ, ಸುಜಾತಾ, ಮಹೇಶ್ವರಗೌಡ, ಸುಭಾಷ್ ನಾಯ್ಕ್, ಎಚ್.ಎಂ. ಕೊಟ್ರೇಶ್, ಯು. ಕೊಟ್ರೇಶ್ ಸೇರಿದಂತೆ ಇತರ ವಕೀಲರು ಮತ್ತು ನ್ಯಾಯಾಲಯದ ಸಿಬ್ಬಂದಿ ಉಪಸ್ಥಿತರಿದ್ದರು.

ಕಾರ್ಯಕ್ರಮವನ್ನು ವಕೀಲರಾದ ವೀಣಾ ಎಚ್, ಸುನೀತಾ ಹಾಗೂ ವಾಸಂತಿ ಸಾಲ್ಮನಿ ನಿರ್ವಹಿಸಿದರು.

# ದ್ವಿಭಾಷಾ ನೀತಿ ಜಾರಿಗೆ ಪ್ರಜಾತಾಂತ್ರಿಕ ಸಮಾಲೋಚನೆ ಅಗತ್ಯ



■ ವಿಜಯಸಾಕ್ಷಿ ಸುದ್ದಿ, ಗದಗ

ರಾಜ್ಯದಲ್ಲಿ ಎಸೆಸೆಲ್ಸಿ ಪರೀಕ್ಷೆಯಲ್ಲಿ ತೃತೀಯ ಭಾಷೆಗೆ ಅಂಕ ತೆಗೆದು ಗ್ರೇಡಿಂಗ್ ಪದ್ಧತಿಯನ್ನು ಜಾರಿಗೆ ತಂದಿರುವ ಸರ್ಕಾರದ ನಿರ್ಧಾರಕ್ಕೆ AIDSO ಗದಗ ಜಿಲ್ಲಾ ಘಟಕ ತೀವ್ರ ಆಕ್ಷೇಪ ವ್ಯಕ್ತಪಡಿಸಿದೆ.

ಈ ಕುರಿತು ಪ್ರಕಟಣೆ ನೀಡಿರುವ AIDSO ಜಿಲ್ಲಾ ಸಂಚಾಲಕಿ ಎಂ. ಶಾಂತಿ ಅವರು, ತೃತೀಯ ಭಾಷೆಯನ್ನು ಕಡ್ಡಾಯ ತೇರ್ಗಡೆ ಪಟ್ಟಿಯಿಂದ ಹೊರಗಿಟ್ಟು ಒಟ್ಟಾರೆ ಅಂಕಗಳನ್ನು 525ಕ್ಕೆ ಇಳಿಸಿರುವುದು ದ್ವಿಭಾಷಾ ನೀತಿಯನ್ನು ಜಾರಿಗೆ ತರಲು ಮುಂದಿನ ಹೆಜ್ಜೆಯಾಗಿದೆ ಎಂದು ತಿಳಿಸಿದರು.

ಹಿಂದಿ ಭಾಷೆಯ ಒತ್ತಡವನ್ನು ಕಡಿಮೆಗೊಳಿಸುವ ಉದ್ದೇಶದಿಂದ ಈ ಕ್ರಮ ಕೈಗೊಂಡಿರುವುದು ಗಮನಾರ್ಹವಾದರೂ, ಪರೀಕ್ಷೆಯ ಮಧ್ಯ ಭಾಗದಲ್ಲೇ ಯಾವುದೇ ಸಮಾಲೋಚನೆ ಇಲ್ಲದೆ ನಿರ್ಧಾರವನ್ನು ಘೋಷಿಸಿರುವುದು ಅಪ್ರಜಾತಾಂತ್ರಿಕ ಕ್ರಮವಾಗಿದೆ ಎಂದು ಅವರು ಆಕ್ಷೇಪಿಸಿದ್ದಾರೆ.

ವಿದ್ಯಾರ್ಥಿಗಳ ಹಿತದೃಷ್ಟಿಯ ಹೆಸರಿನಲ್ಲಿ ಇಂತಹ ನಿರ್ಧಾರಗಳನ್ನು ಕೈಗೊಳ್ಳುವುದರಿಂದ ಮುಂದಿನ ದಿನಗಳಲ್ಲಿ ಶಿಕ್ಷಣ ವಿರೋಧಿ ನೀತಿಗಳನ್ನು ಸಹ ಯಾವುದೇ ಚರ್ಚೆ ಇಲ್ಲದೆ ಜಾರಿಗೆ ತರುವ ಪರಿಸ್ಥಿತಿ ನಿರ್ಮಾಣವಾಗಬಹುದು ಎಂದು ಎಚ್ಚರಿಸಿದ್ದಾರೆ.

ಶೈಕ್ಷಣಿಕ ವರ್ಷದ ಕೊನೆಯಲ್ಲಿ ಶಿಕ್ಷಕರು, ಪೋಷಕರು ಹಾಗೂ ವಿದ್ಯಾರ್ಥಿಗಳ ಅಭಿಪ್ರಾಯ ಪಡೆಯದೇ ನೀತಿಗಳನ್ನು ಬದಲಾಯಿಸುವುದು ಶಿಕ್ಷಣದ ಮೂಲ ಉದ್ದೇಶಕ್ಕೆ ಧಕ್ಕೆ ಉಂಟುಮಾಡುತ್ತದೆ ಎಂದು ಎಂ. ಶಾಂತಿ ತಿಳಿಸಿದ್ದಾರೆ.

ಮಾತೃಭಾಷೆ ಮತ್ತು ಆಂಗ್ಲ ಭಾಷೆಯನ್ನು ಒಳಗೊಂಡ ದ್ವಿಭಾಷಾ ನೀತಿಯನ್ನು ರಾಜ್ಯದಲ್ಲಿ ಜಾರಿಗೆ ತರಬೇಕು ಎಂದು ಆಗ್ರಹಿಸಿದ ಅವರು, ಶಿಕ್ಷಣ ಸಂಬಂಧಿತ ಎಲ್ಲಾ ನೀತಿಗಳನ್ನು ಪ್ರಜಾತಾಂತ್ರಿಕ ಸಮಾಲೋಚನೆಯ ಮೂಲಕವೇ ಜಾರಿಗೆ ತರಬೇಕು ಎಂದು ಸರ್ಕಾರವನ್ನು ಅವರು ಒತ್ತಾಯಿಸಿದ್ದಾರೆ.

# ರಜತ ಸಂಭ್ರಮಕ್ಕೆ ಕಾಳಿದಾಸ ಶಿಕ್ಷಣ ಸಮಿತಿ ಸಜ್ಜು

## 25 ವರ್ಷಗಳ ಸಾಧನೆಗೆ ವರ್ಷಪೂರ್ತಿ ಕಾರ್ಯಕ್ರಮಗಳ ಮಹಾಯೋಜನೆ




> "ರಜತ ಮಹೋತ್ಸವದ ಅಂಗವಾಗಿ ನಡೆಯುವ ಎಲ್ಲಾ ಕಾರ್ಯಕ್ರಮಗಳನ್ನು ಯಶಸ್ವಿಗೊಳಿಸಿ ಸಮಿತಿಯ ಸೇವೆಯನ್ನು ಅವಿಸ್ಮರಣೀಯಗೊಳಿಸೋಣ"
> – **ಫಕೀರಪ್ಪ ಹೆಬಸೂರ,** ಕುರುಬ ಸಂಘದ ಗದಗ ಜಿಲ್ಲಾ ಅಧ್ಯಕ್ಷರು.

■ ವಿಜಯಸಾಕ್ಷಿ ಸುದ್ದಿ, ಗದಗ

ನಗರದ ದೇವರಾಜ ಅರಸು ಹಾಸ್ಟೆಲ್ ಆವರಣದಲ್ಲಿ ಶ್ರೀ ಕಾಳಿದಾಸ ಶಿಕ್ಷಣ ಸಮಿತಿಯ ರಜತ ಮಹೋತ್ಸವದ ಪೂರ್ವಭಾವಿ ಸಭೆ ನಡೆಯಿತು.

ಸಭೆಯಲ್ಲಿ ಮಾತನಾಡಿದ ಕರ್ನಾಟಕ ಪ್ರದೇಶ ಕುರುಬ ಸಂಘದ ಜಿಲ್ಲಾಧ್ಯಕ್ಷ ಫಕೀರಪ್ಪ ಹೆಬಸೂರ ಅವರು, ನಗರದಲ್ಲಿ ಶಿಕ್ಷಣ ಕ್ರಾಂತಿಯನ್ನು ರೂಪಿಸಿದ ಸಮಿತಿಗೆ ಎಲ್ಲರೂ ಚಿರಋಣಿಯಾಗಿದ್ದು, ರಜತ ಮಹೋತ್ಸವದ ಅಂಗವಾಗಿ ವರ್ಷಪೂರ್ತಿ ನಡೆಯುವ ಕಾರ್ಯಕ್ರಮಗಳನ್ನು ಯಶಸ್ವಿಗೊಳಿಸುವ ಮೂಲಕ ಸಮಿತಿಯ ಸೇವಾಕಾರ್ಯಗಳನ್ನು ಸ್ಮರಣೀಯಗೊಳಿಸೋಣ ಎಂದರು.

ನಿವೃತ್ತ ನ್ಯಾಯಾಧೀಶ ಎಸ್.ಜಿ. ಪಲ್ಲೇದ ಅವರು ಮಾತನಾಡಿ, 25 ವರ್ಷಗಳ ಸಾಧನೆ ಮಹತ್ವದ್ದಾಗಿದ್ದು, ಸಾರ್ವಜನಿಕರ ಸಲಹೆಗಳನ್ನು ಒಳಗೊಂಡು ಪೂರ್ವಭಾವಿ ಸಭೆ ನಡೆಸಿರುವುದು ಪ್ರಶಂಸನೀಯವಾಗಿದೆ. ಈ ಕಾರ್ಯಕ್ರಮಗಳು ಜಿಲ್ಲೆಗೆ ಮಾದರಿಯಾಗಲಿವೆ ಎಂದರು.

ಡಾ. ಜಿ.ಬಿ. ಪಾಟೀಲ ಅವರು ಸಮಾಜಮುಖಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುವ ಸಮಿತಿಯ ಕಾರ್ಯ ಶ್ಲಾಘನೀಯ ಎಂದು ಅಭಿಪ್ರಾಯಪಟ್ಟರು.ಶಶಿಧರ ರೊಳ್ಳಿ ಅವರು ಮಾತನಾಡಿ, ನವೆಂಬರ್ 16 ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕಾರ್ಯಕ್ರಮಕ್ಕೆ ಆಗಮಿಸಲಿದ್ದು, ಎಲ್ಲರೂ ಸಹಕಾರ ನೀಡಬೇಕೆಂದು ಹೇಳಿದರು. ಹಾಲುಮತ ಮಹಾಸಭಾ ರಾಜ್ಯಾಧ್ಯಕ್ಷ ರುದ್ರಣ್ಣ ಗುಳಗುಳಿ ಅವರು ಯೋಗ ದಿನಾಚರಣೆ ಹಾಗೂ ಸಾವಯವ ಕೃಷಿ ಕಾರ್ಯಕ್ರಮಗಳಿಗೆ ಸಹಕಾರ ನೀಡುವುದಾಗಿ ಭರವಸೆ ನೀಡಿದರು.

ಡಾ. ಉಮೇಶ ಪುರದ ಅವರು ಸಂಸ್ಥೆಯ ಭವಿಷ್ಯ ವಿಸ್ತರಣೆ ಕುರಿತು ಮಾತನಾಡಿ, ಎಲ್ಲಾ ಅಂಗ ಸಂಸ್ಥೆಗಳನ್ನು ಒಂದೇ ಸ್ಥಳದಲ್ಲಿ ಒಗ್ಗೂಡಿಸುವ ಯೋಜನೆಗೆ ಶುಭಹಾರೈಸಿದರು.

ಬಿಜೆಪಿ ಮುಖಂಡ ಎಂ.ಎಸ್. ಕರಿಗೌಡ್ರ ಅವರು ಮಹಿಳೆಯರಿಗೆ ವಿಶೇಷ ಅವಕಾಶಗಳನ್ನು ಕಲ್ಪಿಸುವಂತೆ ಸಲಹೆ ನೀಡಿದರು.

ವಿಶ್ವಕರ್ಮ ಸಮಾಜದ ಮುಖಂಡ ಆರ್.ಡಿ. ಕಡ್ಲಿಕೊಪ್ಪ ಅವರು ರಜತ ಮಹೋತ್ಸವವನ್ನು ಸ್ಮರಣೀಯಗೊಳಿಸುವಂತೆ ಕರೆ ನೀಡಿದರು. ಪಾಲಕರ ಪರವಾಗಿ ಈರಣ್ಣ ಮೇಟಿ ಅವರು ಸಹಕಾರ ನೀಡುವುದಾಗಿ ಹೇಳಿದರು.

ಪ್ರಾಸ್ತಾವಿಕವಾಗಿ ನೀಲಕಂಠ ಮರುಡಿ ಅವರು ಮಾತನಾಡಿ, ಎಪ್ರಿಲ್ 18 ರಂದು ಹಾಸ್ಯಸಂಜೆ ಸೇರಿದಂತೆ ವರ್ಷಪೂರ್ತಿ ಪರಿಸರ ದಿನಾಚರಣೆ, ಯೋಗ ದಿನಾಚರಣೆ, ಗುರುಪೂರ್ಣಿಮೆ, ಆರೋಗ್ಯ ಶಿಬಿರ, ಕ್ರೀಡಾಕೂಟ, ಮಹಿಳಾ ದಿನಾಚರಣೆ ಸೇರಿದಂತೆ ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ವಿವರಿಸಿದರು.

ಈ ಸಂದರ್ಭದಲ್ಲಿ ಹಲವು ಗಣ್ಯರು ಉಪಸ್ಥಿತರಿದ್ದರು. ಕಾರ್ಯಕ್ರಮವನ್ನು ಕೆ.ಬಿ. ಕಂಬಳಿ ಅವರು ನಿರೂಪಿಸಿದರು.

# ಎ. 2ರಿಂದ ಅಲ್ಲಮ ಪ್ರಭುಸ್ವಾಮಿ ಜಾತ್ರೆ ಮಹೋತ್ಸವ

■ ವಿಜಯಸಾಕ್ಷಿ ಸುದ್ದಿ, ಮುಳಗುಂದ

ಪಟ್ಟಣದ ಹೊರ ವಲಯದಲ್ಲಿರುವ ಅಲ್ಲಮ ಪ್ರಭುಸ್ವಾಮಿ ಮಠದಲ್ಲಿ ಎಪ್ರಿಲ್ 2 ಮತ್ತು 3ರಂದು ಜಾತ್ರಾ ಮಹೋತ್ಸವವು ಭಕ್ತಿಭಾವದೊಂದಿಗೆ ಜರುಗಲಿದೆ.

ಎಪ್ರಿಲ್ 2ರಂದು ಗುರುವಾರ ಬೆಳಿಗ್ಗೆ ಅಲ್ಲಮ ಪ್ರಭುಸ್ವಾಮಿ ಗದ್ದುಗೆಗೆ ವಿಶೇಷ ಪೂಜಾ ಕೈಂಕರ್ಯ ಹಾಗೂ ಮಹಾಪ್ರಸಾದ ನಡೆಯಲಿದೆ. ಮಧ್ಯಾಹ್ನ 4 ಗಂಟೆಗೆ ಶರಣ ಸಾಹಿತ್ಯ ಪರಿಷತ್ತು ಹಾಗೂ ಕದಳಿ ವೇದಿಕೆ ವತಿಯಿಂದ ಅಲ್ಲಮ ಪ್ರಭುಸ್ವಾಮಿ ಕುರಿತು ಉಪನ್ಯಾಸ ಹಾಗೂ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ.

ಸಂಜೆ 5 ಗಂಟೆಗೆ ಸಕಲ ವಾದ್ಯ ಮೇಳಗಳೊಂದಿಗೆ ಮಹಾ ರಥೋತ್ಸವ ಜರುಗಲಿದೆ.

ಎಪ್ರಿಲ್ 3ರಂದು ಶುಕ್ರವಾರ ಬೆಳಿಗ್ಗೆ ವಿಶೇಷ ಪೂಜೆಯ ಬಳಿಕ ವಿವೇಕ ಜಂಗಮನಿ ಅವರಿಂದ ಮಹಾಪ್ರಸಾದ ಸೇವೆ ನಡೆಯಲಿದೆ.

ಸಂಜೆ 5 ಗಂಟೆಗೆ ವೀರಭದ್ರೇಶ್ವರ ಪುರವಂತರಿಂದ ಸಂಭಾಳ ಮತ್ತು ಒಡಪುಗಳೊಂದಿಗೆ ಕಡುಬಿನ ಕಾಳಗ ಕಾರ್ಯಕ್ರಮವನ್ನು ಸಿದ್ದರಾಮಯ್ಯ ಹಿರೇಮಠ ಅವರಿಂದ ನಡೆಸಲಾಗುವುದು.

ಈ ಕುರಿತು ಮಾಹಾಂತೇಶ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಮಹಿಳೆಯರನ್ನು ಗೌರವದಿಂದ ಕಾಣಬೇಕು: ವೈಜಯಂತಿ ವಂಟಕರ್



■ ವಿಜಯಸಾಕ್ಷಿ ಸುದ್ದಿ, ಮುಳಗುಂದ


ಮಹಿಳೆ ಕೇವಲ ಮನೆಯೊಳಗೆ ಸೀಮಿತವಾಗಿರದೆ, ಸಮಾಜದ ಎಲ್ಲಾ ಕ್ಷೇತ್ರಗಳಲ್ಲಿ ತನ್ನ ಛಾಪು ಮೂಡಿಸಿದ್ದಾಳೆ. ಸಮಾಜದಲ್ಲಿ ಮಹಿಳೆಯರನ್ನು ಗೌರವದಿಂದ ಕಾಣಬೇಕು ಎಂದು ವೈಜಯಂತಿ ವಂಟಕರ್ ಹೇಳಿದರು.

ಪಟ್ಟಣದ ಮುರುಳಿಧರ ಮಂದಿರದಲ್ಲಿ ಭಾವಸಾರ ಕ್ಷತ್ರಿಯ ಸಮಾಜದ ವತಿಯಿಂದ ಆಯೋಜಿಸಿದ ಮಹಿಳಾ ದಿನಾಚರಣೆಯಲ್ಲಿ ಸಾಧಕ ಮಹಿಳೆಯರಿಗೆ ಸನ್ಮಾನಿಸಿ ಅವರು ಮಾತನಾಡಿದರು. ಮಹಿಳೆ ಅಬಲೆ ಅಲ್ಲ, ಸಬಲೆಯಾಗಿ ಮನೆ ಜವಾಬ್ದಾರಿಯ ಜೊತೆಗೆ ಸಮಾಜದ ವಿವಿಧ ಕ್ಷೇತ್ರಗಳಲ್ಲೂ ಸಮರ್ಥವಾಗಿ ಜವಾಬ್ದಾರಿ ನಿಭಾಯಿಸುತ್ತಿದ್ದಾಳೆ. ಭಾರತ ದೇಶದಲ್ಲಿ ಮಹಿಳೆಗೆ ಪೂಜ್ಯ ಸ್ಥಾನಮಾನ ನೀಡಲಾಗಿದ್ದು, ಪ್ರತಿಯೊಬ್ಬರೂ ಮಹಿಳೆಯರನ್ನು ಗೌರವದಿಂದ ಕಾಣಬೇಕು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಸುಮನ್ ಚವಡಿ, ಹರ್ಷಲತಾ ದೇಶಪಾಂಡೆ, ಅರುಣಾ ಸೋನಗೋಜಿ, ಸುನಂದಾ ನವಲೆ, ಡಾ. ಮಮತಾ ಸಂತೋಷ, ಶೋಭಾ ಪಾಟೀಲ, ರೇಖಾ ಸೋನಗೋಜಿ ಉಪಸ್ಥಿತರಿದ್ದರು.

# ದಾವಣಗೆರೆ ಉಪಚುನಾವಣೆ: ಮುಸ್ಲಿಂ ಸಮುದಾಯಕ್ಕೆ ಪ್ರಾತಿನಿಧ್ಯ ನೀಡಿ

■ ವಿಜಯಸಾಕ್ಷಿ ಸುದ್ದಿ, ಗದಗ



ದಾವಣಗೆರೆ ಉಪ ಚುನಾವಣೆಯಲ್ಲಿ ಮುಸ್ಲಿಂ ಸಮುದಾಯಕ್ಕೆ ಟಿಕೆಟ್ ದೊರಕದಿರುವುದು ಸಮುದಾಯದಲ್ಲಿ ಅಸಮಾಧಾನ ಮೂಡಿಸಿದ್ದು, ಮುಂಬರುವ ಚುನಾವಣೆಯಲ್ಲಿ ಸಮರ್ಪಕ ರಾಜಕೀಯ ಪ್ರಾತಿನಿಧ್ಯ ನೀಡಬೇಕು ಎಂದು ಅಖಿಲ ಕರ್ನಾಟಕ ಮುಸ್ಲಿಂ ಮಹಾಸಭಾ ಒತ್ತಾಯಿಸಿದೆ.

ಈ ಕುರಿತು ಪ್ರಕಟಣೆ ನೀಡಿಔ ಮಹಾಸಭಾದ ರಾಜ್ಯಾಧ್ಯಕ್ಷ ಮಹ್ಮದಶಫಿ ಎಸ್. ನಾಗರಕಟ್ಟೆ, ಪ್ರಜಾಪ್ರಭುತ್ವದಲ್ಲಿ ಜನಸಂಖ್ಯೆ ಮತ್ತು ನಿಷ್ಠೆಯ ಆಧಾರದ ಮೇಲೆ ಪ್ರಾತಿನಿಧ್ಯ ಕೇಳುವುದು ಸಮುದಾಯದ ಹಕ್ಕು ಎಂದು ಹೇಳಿದ್ದಾರೆ.

ದಶಕಗಳಿಂದ ಕಾಂಗ್ರೆಸ್ ಪಕ್ಷಕ್ಕೆ ಬೆಂಬಲ ನೀಡುತ್ತಿರುವ ಮುಸ್ಲಿಂ ಸಮುದಾಯಕ್ಕೆ ಟಿಕೆಟ್ ನೀಡದೇ ಇರುವುದರಿಂದ ನೋವುಂಟಾಗಿದೆ.

ದಾವಣಗೆರೆ ಭಾಗದಲ್ಲಿ ಸಮುದಾಯದ ಜನಸಂಖ್ಯೆ ಗಣನೀಯವಾಗಿದ್ದು, ಟಿಕೆಟ್ ಆಕಾಂಕ್ಷೆ ವ್ಯಕ್ತಪಡಿಸುವುದು ನ್ಯಾಯಸಮ್ಮತವಾಗಿದೆ ಎಂದು ಹೇಳಿದರು. ಕೆಲವು ಕೋಮುವಾದಿ ಶಕ್ತಿಗಳು ಮುಸ್ಲಿಂ ಸಮುದಾಯದ ಟಿಕೆಟ್ ಬೇಡಿಕೆಯನ್ನು ತಪ್ಪಾಗಿ ಬಿಂಬಿಸುತ್ತಿರುವುದು ಖಂಡನೀಯ. ವಿರೋಧ ಪಕ್ಷದ ಕೆಲ ನಾಯಕರ ಹಸ್ತಕ್ಷೇಪವು ಸಂಕುಚಿತ ಮನೋಭಾವವನ್ನು ತೋರಿಸುತ್ತದೆ ಎಂದು ಟೀಕಿಸಿದ್ದಾರೆ. ಪ್ರಸ್ತುತ ರಾಜಕೀಯ ಪರಿಸ್ಥಿತಿಯನ್ನು ಗಮನಿಸಿ ಸಮುದಾಯವು ತಾಳ್ಮೆಯಿಂದ ಇರಬೇಕು. ಹಿರಿಯ ನಾಯಕ ಶಾಮನೂರು ಶಿವಶಂಕರಪ್ಪ ಅವರ ಕುಟುಂಬಕ್ಕೆ ಈ ಅವಧಿಯಲ್ಲಿ ಸಂಪೂರ್ಣ ಸಹಕಾರ ನೀಡಬೇಕೆಂದು ಮನವಿ ಮಾಡಿದರು. ಆದರೆ, ಈ ತ್ಯಾಗವನ್ನು ಪಕ್ಷ ಗುರುತಿಸಿ, ಮುಂಬರುವ ಸಾರ್ವತ್ರಿಕ ಚುನಾವಣೆಯಲ್ಲಿ ಮುಸ್ಲಿಂ ಸಮುದಾಯದ ಅಭ್ಯರ್ಥಿಗೆ ಟಿಕೆಟ್ ನೀಡುವ ಮೂಲಕ ಸಾಮಾಜಿಕ ನ್ಯಾಯವನ್ನು ಸಾಧಿಸಬೇಕು ಎಂದು ಒತ್ತಾಯಿಸಿದ್ದಾರೆ.

# ಭಕ್ತಿ ವೈಭವಕ್ಕೆ ಗೌರವ: ವಿಜಯದುರ್ಗಾ ಟ್ರಸ್ಟ್ ಪದಾಧಿಕಾರಿಗಳಿಗೆ ಸನ್ಮಾನ



■ ವಿಜಯಸಾಕ್ಷಿ ಸುದ್ದಿ, ಗದಗ

ಕರ್ನಾಟಕ ಮಾದಿಗ ಸಂಘರ್ಷ ಸಮಿತಿ ಗದಗ ಜಿಲ್ಲಾ ಘಟಕ ಹಾಗೂ ಶ್ರೀ ಕೆಂಚಮ್ಮ ದೇವಸ್ಥಾನ ಸೇವಾ ಸಮಿತಿ ಟ್ರಸ್ಟ್ ಕಮಿಟಿಯ ಸಂಯುಕ್ತ ಆಶ್ರಯದಲ್ಲಿ, ಶ್ರೀ ವಿಜಯದುರ್ಗಾದೇವಿ ದೇವಸ್ಥಾನ ಸೇವಾ ಟ್ರಸ್ಟ್ (ರಿ) ಪದಾಧಿಕಾರಿಗಳು ಮತ್ತು ಸಮಾಜದ ಗುರುಹಿರಿಯರನ್ನು ಸನ್ಮಾನಿಸಿ ಗೌರವಿಸಲಾಯಿತು.

ನಗರದ ಡಿ.ಸಿ. ಮಿಲ್ ರಸ್ತೆ ತಳಗೇರಿ ಓಣಿಯಲ್ಲಿ ಇರುವ ಶ್ರೀ ವಿಜಯದುರ್ಗಾದೇವಿ ದೇವಸ್ಥಾನದಲ್ಲಿ ನೂತನ ಗೋಪುರ ಲೋಕಾರ್ಪಣೆ ಹಾಗೂ ಕಳಸಾರೋಹಣ ಸಮಾರಂಭವನ್ನು ಮಾರ್ಚ್ 24 ರಂದು ಭಕ್ತಿಭಾವದಿಂದ ನೆರವೇರಿಸಲಾಯಿತು. ಈ ಸಂದರ್ಭದಲ್ಲಿ ಕಲಾತಂಡ, ವಾದ್ಯಗಳ ಜೊತೆಗೆ 180 ಮಹಿಳೆಯರ ಕುಂಭಮೇಳದೊಂದಿಗೆ ಭವ್ಯ ಕಳಸ ಮೆರವಣಿಗೆ ಶ್ರೀ ಉಡಚಮ್ಮದೇವಿ ದೇವಸ್ಥಾನದಿಂದ ಆರಂಭವಾಗಿ ನಗರದ ಪ್ರಮುಖ ರಸ್ತೆಗಳ ಮೂಲಕ ದೇವಸ್ಥಾನದಲ್ಲಿ ಮುಕ್ತಾಯಗೊಂಡಿತು.

ಮಾರ್ಚ್ 25 ರಂದು ಜಗದೀಶ್ ಭಟ್ ಕಲ್ಯಾಣ ಭಟ್ಟ ಜೋಶಿ ಅವರ ನೇತೃತ್ವದಲ್ಲಿ ಪುಣ್ಯಾಹವಾಚನ, ಮಹಾಗಣಪತಿ ಪೂಜೆ ಹಾಗೂ ವಿವಿಧ ಹೋಮಗಳು ನೆರವೇರಿದವು. ಮಾರ್ಚ್ 26 ರಂದು ದೇವಸ್ಥಾನ ಟ್ರಸ್ಟ್‌ನ ಗುರುಹಿರಿಯರಿಗೆ ಸನ್ಮಾನ ಕಾರ್ಯಕ್ರಮ ಜರುಗಿತು.

ಮಾರ್ಚ್ 27 ರಂದು ಮಹಾಮಂಗಳಾರತಿ ಮತ್ತು ಅನ್ನಸಂತರ್ಪಣೆ ಕಾರ್ಯಕ್ರಮಗಳು ಭಕ್ತಿಭಾವದಿಂದ ನಡೆಯಿತು.

ಈ ಎಲ್ಲಾ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನೆರವೇರಿಸಿದ ದೇವಸ್ಥಾನ ಟ್ರಸ್ಟ್‌ನ ಪದಾಧಿಕಾರಿಗಳು ಹಾಗೂ ಸಮಾಜದ ಹಿರಿಯರನ್ನು ಕರ್ನಾಟಕ ಮಾದಿಗ ಸಂಘರ್ಷ ಸಮಿತಿಯ ಜಿಲ್ಲಾಧ್ಯಕ್ಷ ರಾಘವೇಂದ್ರ ಪರಸಪ್ಪ ಪರಾಪೂರ ಅವರ ನೇತೃತ್ವದಲ್ಲಿ ಸನ್ಮಾನಿಸಿ ಗೌರವಿಸಲಾಯಿತು.

# ಎ.2ರಂದು ಆಂಜನೇಯ ಸ್ವಾಮಿ ಜಯಂತಿ

## ಮಹಾರುದ್ರಾಭಿಷೇಕ, ಪಲ್ಲಕ್ಕಿ ಉತ್ಸವ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳ ಆಯೋಜನೆ

■ ವಿಜಯಸಾಕ್ಷಿ ಸುದ್ದಿ, ಗದಗ



ನಗರದ ಕಳಸಾಪುರ ರಸ್ತೆಯ ವಿಶ್ವೇಶ್ವರಯ್ಯ ನಗರದಲ್ಲಿರುವ ವಿಘ್ನೇಶ್ವರ ಸೇವಾ ಸಮಿತಿಯ ವತಿಯಿಂದ ಎಪ್ರಿಲ್ 2 ರಂದು ಗುರುವಾರ ಶ್ರೀ ಆಂಜನೇಯ ಸ್ವಾಮಿ ಜಯಂತ್ಯೋತ್ಸವವನ್ನು ವೈಭವದಿಂದ ಆಚರಿಸಲಾಗುತ್ತಿದೆ.

ಅಂದು ಬೆಳಿಗ್ಗೆ 5 ಗಂಟೆಗೆ ಮಹಾರುದ್ರಾಭಿಷೇಕದಿಂದ ಕಾರ್ಯಕ್ರಮಗಳಿಗೆ ಚಾಲನೆ ದೊರೆಯಲಿದೆ. ನಂತರ ಬೆಳಿಗ್ಗೆ 6 ರಿಂದ 6.30ರವರೆಗೆ ಪ್ರಾರ್ಥನೆ, 6.30ಕ್ಕೆ ಬಾಲಮಾರುತಿ ತೊಟ್ಟಿಲೋತ್ಸವ, ಜೋಗುಳ ಹಾಗೂ ಮುತ್ತೈದೆಯರಿಗೆ ಉಡಿ ತುಂಬುವ ಕಾರ್ಯಕ್ರಮಗಳು ನಡೆಯಲಿವೆ. ಕೋಟಿ ಓಂ ನಮಃ ಶಿವಾಯ ಜಪ ಸಮಾಪ್ತಿಯ ಅಂಗವಾಗಿ ಶ್ರೀ ರುದ್ರ ಹೋಮ ನಡೆಯಲಿದೆ. ಮಧ್ಯಾಹ್ನ 1 ಗಂಟೆಗೆ ಮಹಾ ಅನ್ನಸಂತರ್ಪಣೆ ಜರುಗಲಿದೆ.

ಸಂಜೆ 6 ಗಂಟೆಗೆ ಪಲ್ಲಕ್ಕಿ ಉತ್ಸವ ನಡೆಯಲಿದ್ದು, 6.30ಕ್ಕೆ ಆಂಜನೇಯ ಬಳಗದ ಸಹೋದರಿಯರು ಹಾಗೂ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಲಿವೆ. ನಂತರ ಸಂಜೆ 7.30ಕ್ಕೆ ಗಣೇಶ ಮೆಲೋಡಿ ಆರ್ಕೆಸ್ಟ್ರಾ ತಂಡದಿಂದ ರಸಮಂಜರಿ ಕಾರ್ಯಕ್ರಮ ಆಯೋಜಿಸಲಾಗಿದೆ.

ಕಾರ್ಯಕ್ರಮಕ್ಕೆ ಬೆಳ್ಳಟ್ಟಿ-ಕೊಕ್ಕರಗುಂದಿ-ನೀರಲಗಿ ಶ್ರೀ ರಾಮಲಿಂಗೇಶ್ವರ ದಾಸೋಹ ಮಠದ

ಬಸವರಾಜ ಮಹಾಸ್ವಾಮಿಗಳು ಸಾನಿಧ್ಯ ವಹಿಸುವರು. ಅಧ್ಯಕ್ಷತೆಯನ್ನು ಸಮಿತಿಯ ಅಧ್ಯಕ್ಷ ರವೀಂದ್ರರಡ್ಡಿ ಎಫ್. ಇನಾಮತಿ ವಹಿಸುವರು.

ಮುಖ್ಯ ಅತಿಥಿಗಳಾಗಿ ವಿಧಾನ ಪರಿಷತ್ ಸದಸ್ಯ ಎಸ್.ವಿ. ಸಂಕನೂರು, ಜಿಲ್ಲಾ ಯುವ ಕಾಂಗ್ರೆಸ್ ಅಧ್ಯಕ್ಷ ಕೃಷ್ಣಗೌಡ ಎಚ್. ಪಾಟೀಲ, ನಗರಸಭೆ ಪೌರಾಯುಕ್ತ ರಾಜಾರಾಮ ಪವಾರ, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಅಕ್ಬರಸಾಬ ಬಬರ್ಚಿ ಹಾಗೂ ನಿವೃತ್ತ ಶಿಕ್ಷಕ ಬಿ.ಎಸ್. ಬೆಂತೂರ ಭಾಗವಹಿಸಲಿದ್ದಾರೆ.

ಪ್ರಸಾದ ಸೇವೆಯನ್ನು ಜಿ. ಪವಾರಸನ್ ಕುಟುಂಬದ ಶ್ರೀಮತಿ ಶೈಲಾ ಮತ್ತು ಶ್ರೀನಿವಾಸರಡ್ಡಿ ಬೆಂತೂರ ಪರಿವಾರದವರು ವಹಿಸಿಕೊಂಡಿದ್ದು, ಅಲಂಕಾರ ಸೇವೆಯನ್ನು ಗುತ್ತಿಗೆದಾರ ಆರ್.ವಿ. ಬೆಲಹುಣಸಿ ನಿರ್ವಹಿಸಲಿದ್ದಾರೆ.

ಈ ಕಾರ್ಯಕ್ರಮದಲ್ಲಿ ಸ್ಥಾವರಮಠ ಸ್ಕಿಲ್ಸ್ ಅಕಾಡೆಮಿ (ರಿ) ಹಾಗೂ ಚಂದ್ರಕಲಾ ನೃತ್ಯ ವಿಹಾರ ತಂಡದವರಿಂದ ನೃತ್ಯ ಪ್ರದರ್ಶನ ನಡೆಯಲಿದೆ.

ಈ ಎಲ್ಲ ಕಾರ್ಯಕ್ರಮಗಳಲ್ಲಿ ಭಕ್ತಾಧಿಗಳು ಭಾಗವಹಿಸಿ ಯಶಸ್ವಿಗೊಳಿಸಬೇಕೆಂದು ಸಮಿತಿಯ ಅಧ್ಯಕ್ಷ ರವೀಂದ್ರರಡ್ಡಿ ಇನಾಮತಿ ಹಾಗೂ ಪದಾಧಿಕಾರಿಗಳು ಮನವಿ ಮಾಡಿದ್ದಾರೆ.

# ಪುರುಷರಿಗಿಂತ ಮಹಿಳೆಯರಿಗೇ ಹೆಚ್ಚು ಜವಾಬ್ದಾರಿ

## ವೀರಶೈವ ಲಿಂಗಾಯತ ಪಂಚಮಸಾಲಿ ಸಂಘದ ಮಹಿಳಾ ಘಟಕದ ವತಿಯಿಂದ ಮಹಿಳಾ ದಿನಾಚರಣೆಯಲ್ಲಿ ಡಾ. ಲಕ್ಷ್ಮಿ ಅರವಿಂದ




> "ಇತ್ತೀಚಿನ ದಿನಗಳಲ್ಲಿ ಕೆಲಸದ ಒತ್ತಡ, ಕಲುಷಿತ ವಾತಾವರಣ, ಬದಲಾದ ಆಹಾರ ಪದ್ಧತಿ ಇವುಗಳಿಂದ ಅನೇಕ ಆರೋಗ್ಯ ಸಮಸ್ಯೆಗಳು ಕಂಡು ಬರುತ್ತಿವೆ. ಈ ಹಿನ್ನಲೆಯಲ್ಲಿ ಮಹಿಳೆಯರು ತಮ್ಮ ಆರೋಗ್ಯ ಸಮಸ್ಯೆಗಳನ್ನು ವೈದ್ಯರ ಬಳಿ ತಿಳಿಸಿ ಸೂಕ್ತ ಚಿಕಿತ್ಸೆ ಆರಂಭದಲ್ಲಿಯೇ ಪಡೆಯುವುದು ಅವಶ್ಯ"
> – **ಡಾ. ಲಕ್ಷ್ಮಿ ಅರವಿಂದ ಮಹಾಂತಶೆಟ್ಟರ**

■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಮನೆಯೇ ಮೊದಲ ಪಾಠಶಾಲೆ ತಾಯಿಯೇ ಮೊದಲ ಗುರು ಎನ್ನುವಂತೆ ಪುರುಷರಿಗಿಂತಲೂ ಮಹಿಳೆಯರಿಗೆ ಹೆಚ್ಚಿನ ಜವಾಬ್ದಾರಿ ಮತ್ತು ಪಾತ್ರವಿದೆ. ಸಮಾಜದ ಕಣ್ಣಾಗಿರುವ ಮಹಿಳೆಯರು ತಮ್ಮ ಜವಾಬ್ದಾರಿಯನ್ನು ನಿರ್ವಹಿಸುವ ಜೊತೆಗೆ ತಮ್ಮ ತಮ್ಮ ಆರೋಗ್ಯವನ್ನು ಸರಿಯಾಗಿ ನೋಡಿಕೊಳ್ಳುವುದು ಅತಿ ಅವಶ್ಯ ಎಂದು ಡಾ. ಲಕ್ಷ್ಮಿ ಅರವಿಂದ ಮಹಾಂತಶೆಟ್ಟರ ಅಭಿಪ್ರಾಯಪಟ್ಟರು.

ತಾಲೂಕು ವೀರಶೈವ ಲಿಂಗಾಯತ ಪಂಚಮಸಾಲಿ ಸಂಘದ ಮಹಿಳಾ ಘಟಕದ ವತಿಯಿಂದ ಹಮ್ಮಿಕೊಳ್ಳಲಾಗಿದ್ದ ಮಹಿಳಾ ದಿನಾಚರಣೆ ಅಂಗವಾಗಿ ವಿವಿಧ ಸ್ಪರ್ಧೆಗಳ ಜೊತೆ ಮಹಿಳೆಯರಿಗೆ ಆರೋಗ್ಯ ಮಾಹಿತಿ ನೀಡುವ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಮಹಿಳೆ ಸಮಾಜದಲ್ಲಿ ಎಲ್ಲ ರೀತಿಯ ಪಾತ್ರಗಳನ್ನು ನಿಭಾಯಿಸುತ್ತಾಳೆ. ಮಕ್ಕಳು, ತಂದೆ, ತಾಯಿ ಬಂಧು ಬಳಗ ಹೀಗೆ ಎಲ್ಲವನ್ನು ನೋಡಿಕೊಳ್ಳುವದಕ್ಕೆ ಆದ್ಯತೆ ನೀಡುವದರಿಂದ ಅವಳು ತನ್ನ ಆರೋಗ್ಯದ ಕಡೆ ಗಮನ ಹರಿಸುವುದಿಲ್ಲ ಎಂದರು.

ರೋಗ ಬಂದ ಮೇಲೆ ಪರದಾಡುವದಕ್ಕಿಂತ ಅದನ್ನು ಬರದಂತೆ ತಡೆಯುವುದು ಸಹ ಅಷ್ಟೆ ಮುಖ್ಯವಾಗಿದೆ ಎಂದು ಮಹಿಳೆಯರಿಗೆ ವಿವಿಧ ವಯಸ್ಸಿನಲ್ಲಿ ಉಂಟಾಗಬಹುದಾದ ವಿವಿಧ ಕಾಯಿಲೆಗಳು ಅದರ ಪರಿಹಾರೋಪಾಯಗಳನ್ನು ವಿವರಿಸಿದರು.

ತಾಲೂಕು ವೀರಶೈವ ಲಿಂಗಾಯತ ಪಂಚಮಸಾಲಿ ಸಂಘದ ಮಹಿಳಾ ಘಟಕದ ಅಧ್ಯಕ್ಷೆ ಶಾರದಾ ಮಹಾಂತಶೆಟ್ಟರ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ ಗ್ರಾ.ಪಂ. ಸದಸ್ಯೆಯಾಗುವುದರಿಂದ ರಾಷ್ಟ್ರಪತಿಯಂತಹ ಉನ್ನತ ಹುದ್ದೆಯನ್ನು ನಿಭಾಯಿಸುವ ಸಾಮರ್ಥ್ಯ ಇರುವುದು ಹೆಣ್ಣಿನಲ್ಲಿ. ಪ್ರತಿಯೊಂದು ರಂಗದಲ್ಲಿಯೂ ತನ್ನ ಛಾಪು ಹೊಂದಿರುವ ಮಹಿಳೆಯು ಈ ಜಗತ್ತಿನ ಶ್ರೇಷ್ಠತೆಯ ಸಂಕೇತವಾಗಿದ್ದಾಳೆ ಎಂದರು.

ನಿವೃತ್ತ ಶಿಕ್ಷಕಿ ಶಕುಂತಲಾ ಹೊರಟ್ಟಿ ಪ್ರಾಸ್ತಾವಿಕವಾಗಿ ಸಂಘ ನಡೆದು ಬಂದ ದಾರಿ ಅದರ ಬೆಳವಣಿಗೆಗೆ ಎಲ್ಲರ ಸಹಕಾರ ಸಹಾಯ ಅವಶ್ಯ ಎಂದು ಹೇಳಿದರು. ಸಮಾಜದ ಹಿರಿಯ ಮಹಿಳೆ ರಾಜ್ಯ ಪ್ರಶಸ್ತಿ ಪುರಸ್ಕೃತೆ ಲಲಿತಕ್ಕ ಕೆರಿಮನಿ, ಲಕ್ಷ್ಮವ್ವ ಆಚಾರಿ, ಕಾರ್ಯದರ್ಶಿ ಜಯಶ್ರೀ ಮೆಳ್ಳಿಗೇರಿ, ವಿಜಯಲಕ್ಷ್ಮಿ ಬಾಳಿಕಾಯಿ, ಪೂರ್ಣಿಮಾ ಬಳಿಗಾರ, ಅನ್ನಪೂರ್ಣ ಸಾತಣ್ಣವರ, ಶೈಲಾ ಆದಿ, ಸರಸ್ವತಿ ಹೊನ್ನೆಗೌಡ್ರ, ಸರೋಜಕ್ಕ ಬನ್ನೂರು, ಗುರುಬಾಯಿ ಹುಲಸೂರ, ಕುಸುಮಕ್ಕ ಸೋಮಕ್ಕನವರ, ಪ್ರೇಮಾ ಉಮಚಗಿ, ಅನ್ನಪೂರ್ಣ ಮಹಾಂತಶೆಟ್ಟರ, ವಿದ್ಯಾ ಮಹಾಂತಶೆಟ್ಟರ, ಕವಿತಾ ಅರಳಹಳ್ಳಿ, ಚಂಪಾ ಬಾಳಿಕಾಯಿ, ಭಾರತಿ ಪಂಚಬಾವಿ, ರತ್ನಕ್ಕ ಜೋಶಿ, ಶಾಂತಕ್ಕ ಕಳಸದ, ಅನ್ನಪೂರ್ಣ ಹೂಗಾರ, ಅಂಬಿಕಾ ಪಟ್ಟಣಶೆಟ್ಟಿ ಮುಂತಾದವರು ಉಪಸ್ಥಿತರಿದ್ದರು.

# ಗಾನ ಕೋಗಿಲೆ ಸೀಸನ್-5 ಸೆಮಿಫೈನಲ್ ಸಂಭ್ರಮ!








ಗದಗವಾಣಿ
ಹಾಗೂ ಕ್ರಾಂತಿ ಸೂರ್ಯ ಜೈಭೀಮ
ಸೇನೆಯ ಆಶ್ರಯದಲ್ಲಿ ಗದಗ ನಗರದಲ್ಲಿ ನಡೆದ "ಗಾನ ಕೋಗಿಲೆ ಸೀಸನ್-5" ಸೆಮಿಫೈನಲ್ ಕಾರ್ಯಕ್ರಮದಲ್ಲಿ ಪ್ರತಿಭಾವಂತ ಗಾಯಕರು ಮನಮೋಹಕವಾಗಿ ಗಾಯನ ಪ್ರದರ್ಶನ ನೀಡಿ ಪ್ರೇಕ್ಷಕರ ಮೆಚ್ಚುಗೆ ಗಳಿಸಿದರು. ಕಾರ್ಯಕ್ರಮದಲ್ಲಿ ಪತ್ರಕರ್ತರು, ಅಧಿಕಾರಿಗಳು ಪಾಲ್ಗೊಂಡಿದ್ದರು.







# ಲಕ್ಕುಂಡಿಯಲ್ಲಿ ಪಶು ಆಸ್ಪತ್ರೆ ನಿರ್ಮಾಣಕ್ಕೆ ಚಾಲನೆ

**ಬಣವಿ-ತಿಪ್ಪೆ ತೆರವುಗೆ ರೈತರ ಆಕ್ರೋಶ; ಪರ್ಯಾಯ ವ್ಯವಸ್ಥೆ ಕಲ್ಪಿಸದ ಗ್ರಾ.ಪಂ ವಿರುದ್ಧ ಅಸಮಾಧಾನ!**



**■ ವಿಜಯಸಾಕ್ಷಿ ಸುದ್ದಿ, ಲಕ್ಕುಂಡಿ**

ಗ್ರಾಮದ ಕದಾಂಪುರ ರಸ್ತೆಯಲ್ಲಿರುವ ಗ್ರಾಮ ಪಂಚಾಯತಿಯ 1 ಎಕರೆ 34 ಗುಂಟೆ ಪ್ರದೇಶದ 10 ಗುಂಟೆ ನಿವೇಶನದಲ್ಲಿ ಮೇಲ್ದರ್ಜೆಯ ಪಶು ಆಸ್ಪತ್ರೆ ನಿರ್ಮಾಣ ಕಾಮಗಾರಿ ಆರಂಭವಾಗಲಿದೆ ಎಂದು ಗ್ರಾ.ಪಂ ಆಡಳಿತಾಧಿಕಾರಿ ಶರಣು ಗೋಗೇರಿ ತಿಳಿಸಿದ್ದಾರೆ.

ಈ ಸ್ಥಳದಲ್ಲಿ ಇದ್ದ ಬಣವಿ ಹಾಗೂ ತಿಪ್ಪೆಗಳನ್ನು ತೆರವುಗೊಳಿಸುವ ಕಾರ್ಯಾಚರಣೆ ನಡೆಸಿ ಅವರು ಮಾತನಾಡಿದರು. 2003ರಲ್ಲಿ ಘನ ತ್ಯಾಜ್ಯ ವಿಲೇವಾರಿ ಘಟಕಕ್ಕಾಗಿ ಈ ಜಾಗವನ್ನು ಖರೀದಿ ಮಾಡಲಾಗಿದ್ದು, ಉಳಿದ ಜಾಗವನ್ನು ರೈತರು ಬಣವಿ ಮತ್ತು ತಿಪ್ಪೆ ಹಾಕಿಕೊಂಡು ಬಳಸುತ್ತಿದ್ದರು. ಆದರೆ ಪಶು ಆಸ್ಪತ್ರೆ ನಿರ್ಮಾಣಕ್ಕೆ ಕೇಂದ್ರ ಸರ್ಕಾರದ ಗ್ರಾಮೀಣ ಮೂಲಸೌಕರ್ಯ ಯೋಜನೆಯಡಿ 49.96 ಲಕ್ಷ ಅನುದಾನ ಮಂಜೂರಾಗಿದ್ದು, ಕಾಮಗಾರಿಗೆ ಅಡ್ಡಿಯಾಗಿತ್ತು ಎಂದು ಹೇಳಿದರು.

2017ರಲ್ಲಿಯೇ ಪಶು ಸಂಗೋಪನಾ ಇಲಾಖೆಗೆ 24 ಮೀಟರ್ ಅಗಲ ಮತ್ತು 36 ಮೀಟರ್ ಉದ್ದದ ಜಾಗವನ್ನು ಹಸ್ತಾಂತರಿಸಲಾಗಿತ್ತು. ರೈತರ ಮನವೊಲಿಸಿ, ಪೊಲೀಸ್ ಇಲಾಖೆಯ ಸಹಾಯದಿಂದ ಅಕ್ರಮವಾಗಿ ಬಳಸುತ್ತಿದ್ದ ಜಾಗವನ್ನು ತೆರವುಗೊಳಿಸಲಾಗಿದೆ. 9 ತಿಪ್ಪೆ ಮತ್ತು 10 ಬಣವಿಗಳನ್ನು ರೈತರು ಸೂಚಿಸಿದ ಸ್ಥಳಕ್ಕೆ ಉಚಿತವಾಗಿ ಸ್ಥಳಾಂತರಿಸಲಾಗಿದೆ ಎಂದು ತಿಳಿಸಿದರು. ಅಭಿವೃದ್ಧಿ ಅಧಿಕಾರಿ ಅಮೀರನಾಯಕ ಮಾತನಾಡಿ, ಈಗಿರುವ ಪಶು ಚಿಕಿತ್ಸಾಲಯ ಸಣ್ಣದಾಗಿದ್ದು, ಹೊಸ ಆಸ್ಪತ್ರೆ ನಿರ್ಮಾಣ ಅಗತ್ಯವಿದೆ. ಗ್ರಾಮಸ್ಥರು ಮತ್ತು ರೈತರ ಒತ್ತಾಯದ ಮೇರೆಗೆ ಈ ಕ್ರಮ ಕೈಗೊಳ್ಳಲಾಗಿದೆ. ಮುಂದಿನ ದಿನಗಳಲ್ಲಿ ಅಕ್ರಮ ತಪ್ಪಿಸಲು ಸುತ್ತಲೂ ತಂತಿ ಬೇಲಿ ನಿರ್ಮಿಸಲಾಗುವುದು ಎಂದರು.

ಈ ವೇಳೆ ಪಶು ಸಂಗೋಪನಾ ಇಲಾಖೆಯ ಸಹಾಯಕ ನಿರ್ದೇಶಕ ಎಚ್.ವೈ. ಹೊನ್ನೆನಾಯ್ಕರ ಹಾಗೂ ಗದಗ ಗ್ರಾಮೀಣ ಪೊಲೀಸ್ ಸಿಬ್ಬಂದಿ ಹಾಜರಿದ್ದರು.

> "ತಿಪ್ಪೆ, ಬಣವಿ ಇದ್ದುದರಿಂದ ಕಾಮಗಾರಿ ವಿಳಂಬವಾಗಿತ್ತು, ಇಂದಿನಿಂದಲೇ ಪಶು ಆಸ್ಪತ್ರೆ ನಿರ್ಮಾಣ ಆರಂಭವಾಗಲಿದೆ"
> – **ಎಚ್.ವೈ. ಹೊನ್ನೆನಾಯ್ಕರ,** ಸಹಾಯಕ ನಿರ್ದೇಶಕ, ಪಶು ಸಂಗೋಪನಾ ಇಲಾಖೆ.

### ರೈತರ ಆಕ್ರೋಶ

ಕಳೆದ 20 ವರ್ಷಗಳಿಂದ ಈ ಜಾಗದಲ್ಲಿ ಬಣವಿ ಮತ್ತು ತಿಪ್ಪೆ ಹಾಕಿಕೊಂಡು ಜಾನುವಾರುಗಳನ್ನು ಸಾಕುತ್ತಿದ್ದೇವೆ. ಈಗ ಪರ್ಯಾಯ ವ್ಯವಸ್ಥೆ ಕಲ್ಪಿಸದೆ ತೆರವುಗೊಳಿಸಿರುವುದರಿಂದ ಮೇವು ಸಂಗ್ರಹಕ್ಕೆ ತೊಂದರೆಯಾಗಿದೆ. ಜಾನುವಾರುಗಳನ್ನು ಮಾರಾಟ ಮಾಡುವ ಪರಿಸ್ಥಿತಿ ಬಂದಿದೆ ಎಂದು ರೈತರಾದ ಮುತ್ತಪ್ಪ ಅಬ್ಬಿಗೇರಿ, ರಾಮಪ್ಪ ಅಬ್ಬಿಗೇರಿ ಹಾಗೂ ಮಲ್ಲಪ್ಪ ಅಬ್ಬಿಗೇರಿ ಆಕ್ರೋಶ ವ್ಯಕ್ತಪಡಿಸಿದರು.

# ಆರೋಗ್ಯವೇ ನಿಜವಾದ ಸಂಪತ್ತು-ಯುವಜನತೆಗೆ ಜಾಗೃತಿ ಸಂದೇಶ



**■ ವಿಜಯಸಾಕ್ಷಿ ಸುದ್ದಿ, ಗದಗ**

ತೋಂಟದಾರ್ಯ ಜಾತ್ರಾ ಮಹೋತ್ಸವದ ಅಂಗವಾಗಿ ವ್ಯಸನಮುಕ್ತ ಸಮಾಜ ನಿರ್ಮಾಣದ ಉದ್ದೇಶದಿಂದ ನಗರದಲ್ಲಿ ಜಾಗೃತಿ ಪಾದಯಾತ್ರೆ ನಡೆಯಿತು.

ಪಾದಯಾತ್ರೆಗೆ ಸಾನಿಧ್ಯ ವಹಿಸಿದ್ದ ಡಾ. ತೋಂಟದ ಸಿದ್ಧರಾಮ ಮಹಾಸ್ವಾಮಿಗಳು ಮಾತನಾಡಿ, ಮನುಷ್ಯನಿಗೆ ಸಿರಿ-ಸಂಪತ್ತಿಗಿಂತ ಆರೋಗ್ಯವೇ ಪ್ರಮುಖವಾಗಿದ್ದು, ಆರೋಗ್ಯಕ್ಕಿಂತ ಮಿಗಿಲಾದ ಸಂಪತ್ತು ಯಾವುದೂ ಇಲ್ಲ ಎಂದು ಹೇಳಿದರು.

ವ್ಯಸನಗಳಿಂದ ದೂರವಿದ್ದು ಆರೋಗ್ಯಕರ ಜೀವನ ನಡೆಸಬೇಕು ಎಂದು ಕರೆ ನೀಡಿದರು.

ಸಿರಸಂಗಿ ಮಹಾಲಿಂಗೇಶ್ವರ ಮಠದ ಬಸವಮಹಾಂತ ಸ್ವಾಮಿಗಳು ಯುವಜನತೆ ವ್ಯಸನಗಳಿಗೆ ಒಳಗಾಗುತ್ತಿರುವ ಬಗ್ಗೆ ಆತಂಕ ವ್ಯಕ್ತಪಡಿಸಿ, ಸಾತ್ವಿಕ ಜೀವನ ನಡೆಸುವಂತೆ ಸಲಹೆ ನೀಡಿದರು.

ಈ ಸಂದರ್ಭದಲ್ಲಿ ಸಾರ್ವಜನಿಕರು ಗುಟ್ಕಾ, ತಂಬಾಕು ಸೇರಿದಂತೆ ವಿವಿಧ ವ್ಯಸನಗಳನ್ನು ತ್ಯಜಿಸುವ ಪ್ರತಿಜ್ಞೆ ಕೈಗೊಂಡರು. ನೂರಾರು ಭಕ್ತರು ಪಾದಯಾತ್ರೆಯಲ್ಲಿ ಭಾಗವಹಿಸಿದ್ದರು.

VIJAYA SAKSHI KANNADA DAILY MORNING Editor, Printer, Publisher, & Owned by : Hussainsab M. Shareefanavar, H.No. 130/154, Balaji Nagar, Near Ring Road, Gadag-582103, Dist : Gadag- Karnataka Printed at : Sai Printing Press, Near Joda Maruti Temple, Gadag-582101, Dist : Gadag- Karnataka